ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಸೆಪ್ಟೆಂಬರ್ 2014


॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-14 ಸಂಚಿಕೆ-9 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

## ಗುರುಕಾರುಣ್ಯದಿಂದ ಮನುಷ್ಯನ ಜೀವನ ಪಾವನವಾಗುತ್ತದೆ –ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರು

**''ಮಾನವನು ಲೌಕಿಕ ವ್ಯವಹಾರದಲ್ಲಿ ನಿರತನಾಗುತ್ತಾ, ಜೀವನದಲ್ಲಿ ಉನ್ನತಿಯನ್ನು ಪಡೆಯುವುದರಲ್ಲಿ ಸಮಯವನ್ನು ಕಳೆಯುತ್ತಾನೆ. ಇದನ್ನೇ 'ಸತ್ಯ' ಎಂಬ ಭ್ರಮೆಯಲ್ಲಿರುವ ಮನುಷ್ಯನಿಗೆ ಜೀವನ ಸಾರ್ಥಕ್ಯವನ್ನು ಹೊಂದಬೇಕಾದರೆ ಸ್ವಲ್ಪ ಅಲೌಕಿಕ ಜ್ಞಾನವೂ ಬೇಕಾಗುತ್ತದೆ. ಅಲ್ಲದೆ ಈ ಮಾಯಾ ಪ್ರಪಂಚದಿಂದ ಹೊರಬಂದು ಭವ ಸಾಗರವನ್ನು ದಾಟಿ, ಮೋಕ್ಷವನ್ನು ಪಡೆಯಬೇಕಾದರೆ ಉತ್ಕೃಷ್ಟವಾದ ಜ್ಞಾನ ಸಂಪಾದನೆಯನ್ನೂ ಮಾಡಬೇಕು. ಗುರುಕಾರುಣ್ಯವೊಂದೇ ಈ ಸಮಸ್ತ ಲೋಕವನ್ನೂ ಅಜ್ಞಾನದಿಂದ ಸುಜ್ಞಾನದೆಡೆಗೆ ಕರೆದೊಯ್ಯಬಲ್ಲದು'' ಎಂದು ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಅಭಿಪ್ರಾಯಪಟ್ಟಿದ್ದಾರೆ.**



ಅವರು ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಚಾತುರ್ಮಾಸ ಕಾಲದಲ್ಲಿ ತಮ್ಮ ಭೇಟಿಗಾಗಿ ಆಗಮಿಸಿದ ನಾಡಿನ ಸಮಸ್ತ ಸ್ಥಾನಿಕ ಬಾಂಧವರನ್ನು ಉದ್ದೇಶಿಸಿ ಆಶೀರ್ವಚನ ನೀಡುತ್ತಾ ಈ ರೀತಿ ಮಾತನಾಡಿದರು. ''ಅವತಾರ ಪುರುಷರಾದ ಆಚಾರ್ಯ ಶಂಕರರು ಈ ಕಾರ್ಯಕ್ಕಾಗಿಯೇ ಭರತಖಂಡವನ್ನೆಲ್ಲಾ ಸಂಚರಿಸಿ, ಪ್ರಾಚೀನ ವೈದಿಕ ಧರ್ಮವನ್ನು ದೃಢಗೊಳಿಸಿದ್ದಲ್ಲದೇ ಧರ್ಮದ ಆಚರಣೆಯನ್ನು ಲೋಕಮುಖಕ್ಕೆ ತಿಳಿಸುವುದರೊಂದಿಗೆ ಜ್ಞಾನಮಾರ್ಗವನ್ನೂ ಬೋಧಿಸಿದರು. ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿದರು. ಇಂತಹ ಗುರುಪೀಠಗಳಿಂದ ಕಾಲಕಾಲಕ್ಕೆ ಭಕ್ತರಿಗೆ ಬೇಕಾದ ಮಾರ್ಗದರ್ಶನ ಸಿಗುತ್ತಿರುವುದರಿಂದಲೇ ಲೋಕದಲ್ಲಿ ಸನಾತನ ಧರ್ಮವು ಉಳಿಯುವಂತಾಗಿದೆ. ಈ ವಿಚಾರವನ್ನು ತಿಳಿದಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಾನಿಕ ಸಮಾಜದ ಭಕ್ತಬಾಂಧವರು ತಾವು ಈಗ ಬೇರೆ ಬೇರೆ ಊರಿನಲ್ಲಿ ನೆಲೆಸಿದ್ದರೂ, ನಿರ್ದಿಷ್ಟ ದಿನದಲ್ಲಿ ಇಲ್ಲಿಗೆ ಆಗಮಿಸಿ, ದೇವರ ಸೇವೆ, ಗುರುಸೇವೆಯಲ್ಲಿ ಭಾಗಿಗಳಾಗಿರುವುದು ನಮಗೆ ಸಂತೋಷವನ್ನು ನೀಡಿದೆ'' ಎಂದು ನುಡಿದರು.

ಪ್ರಾರಂಭದಲ್ಲಿ ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಪ್ರಸ್ತಾವನೆಗೈದು ಶ್ರೀಮಠದ ಹಾಗೂ ಸಮಾಜಬಾಂಧವರ ಬಾಂಧವ್ಯ, ಸ್ವಲ್ಪಕಾಲ ಬಾಂಧವ್ಯಕ್ಕೊಳಪಟ್ಟ ಶೈಥಿಲ್ಯ, ಹಾಗೆಯೇ ಶ್ರೀಗಳು ದಕ್ಷಿಣಕನ್ನಡದಲ್ಲಿ ಶಾಖಾ ಮಠ ಸ್ಥಾಪಿಸುವುದರೊಂದಿಗೆ ಸಂಬಂಧಕ್ಕೆ ದೊರಕಿದ ಕಾಯಕಲ್ಪವನ್ನು ಸ್ಮರಿಸಿಕೊಂಡರು. ಕಳೆದ 30 ವರ್ಷಗಳಿಂದ ನಿರಂತರವಾಗಿ ಗುರುದರ್ಶನ ಕಾರ್ಯಕ್ರಮವು ಚಾತುರ್ಮಾಸದಲ್ಲಿ ನಡೆಯುತ್ತಿದ್ದು, ಗಣಪತಿ ಹಬ್ಬದ ಹಿಂದಿನ ಆದಿತ್ಯವಾರ ಶ್ರೀಗಳ ಅಪ್ಪಣೆಯಂತೆ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಗುರುಗಳ ದರ್ಶನ ಪಡೆದು ಧನ್ಯರಾಗುತ್ತಿರುವ ಸಂದರ್ಭವನ್ನು ವಿವರಿಸಿದರು.

ಅಂದು ಶ್ರೀಕ್ಷೇತ್ರ ಶೃಂಗೇರಿಗೆ ಉಡುಪಿ, ಪಡುಬಿದ್ರಿ, ಕಾರ್ಕಳ, ಪಾವಂಜೆ, ಮಂಗಳೂರು, ಬೆಳ್ತಂಗಡಿ, ಪುತ್ತೂರು, ಕುಂದಾಪುರ, ಮೈಸೂರು, ಬೆಂಗಳೂರು ಮೊದಲಾದ ಕಡೆಗಳಿಂದ ಸುಮಾರು ಸಾವಿರಕ್ಕೂ ಮಿಕ್ಕಿ ಸಮಾಜ ಬಾಂಧವರು ಶ್ರೀಗಳ ಭೇಟಿಗೆ ಆಗಮಿಸಿದ್ದುದು ಒಂದು ವಿಶೇಷ. ಉಡುಪಿಯಿಂದ ಸಂಘದ ಅಧ್ಯಕ್ಷರಾದ ಪ್ರಫುಲ್ಲಚಂದ್ರರ ನೇತೃತ್ವದಲ್ಲಿ ಸುಮಾರು 65 ಮಂದಿ ಸಮಾಜಬಾಂಧವರು ಬೆಳಿಗ್ಗೆ 7 ಗಂಟೆಗೆ ಶಾರದಾ ಮಂಟಪದಿಂದ ಹೊರಟು ಶೃಂಗೇರಿ ತಲುಪಿದರು. ಸಂಜೆ 6–30ಕ್ಕೆ ಉಡುಪಿಗೆ ಹಿಂತಿರುಗಿದರು.

## ನಮ್ಮನ್ನಗಲಿದ ಡಾ। ವೈ. ಸರ್ವಜ್ಞಮೂರ್ತಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಖ್ಯಾತ ಆಯುರ್ವೇದ ವೈದ್ಯ, ಜೋತಿಷ್ಕ ಮತ್ತು ಪಂಚಾಂಗಕರ್ತ ದಿ। ಎಲ್ಲೂರು ಎಲ್.ಎನ್. ಜ್ಯೋತಿಷ್ಕರವರ ಪುತ್ರ ಎಲ್ಲೂರಿನ ಹಿರಿಯ ವೈದ್ಯ ಡಾ। ವೈ.ಸರ್ವಜ್ಞಮೂರ್ತಿ ಆಗಸ್ಟ್ 29ರಂದು ಅಸೌಖ್ಯದಿಂದ ನಿಧನರಾದರು. ಅವರಿಗೆ 74 ವರ್ಷವಾಗಿತ್ತು. ಎಲ್ಲೂರಿನಲ್ಲಿ 40 ವರ್ಷಗಳಿಂದಲೂ ಹೆಚ್ಚು ಕಾಲ, ತಮ್ಮ ತಂದೆಯವರಿಂದ ಪಡೆದ ಜೋತಿಷ್ಕ ಹಾಗೂ ಆಯುರ್ವೇದ ವೈದ್ಯಕೀಯ ವೃತ್ತಿಯನ್ನು ನಿರ್ವಹಿಸುತ್ತಿದ್ದರು. ಜ್ಯೋತಿಷ್ಯದ ಜೊತೆಗೆ ಸ್ಥಳ ನೋಡುವುದು, ನೀರಿನ ಶೋಧನೆ, ಗುದ್ದಲಿ ಪೂಜೆ, ಜಾತಕ ಕುಂಡಲಿ ರಚನೆ, ಜಾತಕ ಪ್ರಶ್ನೆ, ಫಲನಿರ್ಣಯ, ಶುಭಮುಹೂರ್ತಕ್ಕೆ ದಿನನಿಗದಿಗೊಳಿಸುವುದು ಇತ್ಯಾದಿ ಕ್ಷೇತ್ರಗಳಲ್ಲಿ ಪರಿಣತಿ ಪಡೆದಿದ್ದು ಇವರು ತಮ್ಮ ವೃತ್ತಿಯಲ್ಲಿ ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಹಾಗೆಯೇ ಇವರು ಜ್ಯೋತಿಷ್ಯ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿ ಬರೆದ ಕೆಲವು ಲೇಖನಗಳು ಪ್ರಕಟವಾಗಿವೆ.

ವೈದ್ಯಕೀಯ ಕ್ಷೇತ್ರ ಇವರ ಅತ್ಯಂತ ಆಸಕ್ತಿಯ ವಿಷಯವಾಗಿದ್ದು ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರ್ ಆಗಿದ್ದರೂ ವೈದ್ಯಕೀಯ ಕಾಲೇಜಿನಲ್ಲಿ ಪದವಿಶಿಕ್ಷಣ ಪಡೆಯಬೇಕೆಂಬ ಆಕಾಂಕ್ಷೆ ಹೊಂದಿದ್ದರೂ, ಕಾರಣಾಂತರಗಳಿಂದ ತಮ್ಮ ಆಕಾಂಕ್ಷೆ ಈಡೇರದಿದ್ದರೂ, ವೈದ್ಯಕೀಯ ಪುಸ್ತಕಗಳನ್ನು ಓದುವ ಹಾಗೂ ಈ ಕ್ಷೇತ್ರಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಳನ್ನು ವಿವಿಧ ಮೂಲಗಳಿಂದ ನಿರಂತರವಾಗಿ ಪಡೆದುಕೊಳ್ಳುವ ಪರಿಪಾಠ ಬೆಳೆಸಿಕೊಂಡಿದ್ದರು.

ವಿಜ್ಞಾನ ಮತ್ತು ಶಿಕ್ಷಣ ಶಾಸ್ತ್ರಗಳಲ್ಲಿ ಪದವೀಧರರಾಗಿರುವ ಇವರು ಕೆಲಕಾಲ ಅದಮಾರು ಪೂರ್ಣಪ್ರಜ್ಞ ಪದವಿಪೂರ್ವ ಕಾಲೇಜಿನಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ತಮ್ಮ ಶೈಕ್ಷಣಿಕ ಸೇವಾವಧಿಯಲ್ಲಿ ರಸಾಯನಶಾಸ್ತ್ರ ಬೋಧಕರಾಗಿ ಇವರು ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಶಾಸ್ತ್ರೀಯ ಸಂಗೀತದಲ್ಲಿಯೂ ಆಸಕ್ತರಾಗಿದ್ದು, ಹಾರ್ಮೋನಿಯಂನ್ನು ನುಡಿಸುವುದು ಇವರ ಹವ್ಯಾಸವಾಗಿತ್ತು.

**ಉಡುಪಿಯಿಂದ ದೂರದ ಎಲ್ಲೂರಿನಲ್ಲಿ ವಾಸ್ತವ್ಯದಲ್ಲಿದ್ದರೂ ಉಡುಪಿಯ ಸಂಘದ ಚಟುವಟಿಕೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದಲ್ಲದೇ ಸಂಘದ ಸ್ಥಾಪನೆಯ ಕಾಲದಿಂದಲೂ ಡಾ। ಐ.ಕೆ.ಶಿವರಾಮರಾವ್, ಅಂಬಲಪಾಡಿ ಕೃಷ್ಣರಾವ್, ಉದ್ಯಾವರ ಅನಂತಕೃಷ್ಣ ರಾವ್ ಮೊದಲಾದ ಹಿರಿಯರೊಂದಿಗೆ ಸಂಘದ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಏಳಿಗೆಗೆ ಶ್ರಮಿಸಿದವರಾದ ಡಾ। ವೈ.ಸರ್ವಜ್ಞಮೂರ್ತಿಯವರು ಉಡುಪಿಯ ಸಂಘದ ನಿರ್ದೇಶಕರಾಗಿ, ಜತೆಕಾರ್ಯದರ್ಶಿಗಳಾಗಿ, ಕಾರ್ಯದರ್ಶಿಗಳಾಗಿ, ಉಪಾಧ್ಯಕ್ಷರಾಗಿ ಸಂಘವನ್ನು ಮುನ್ನಡೆಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಪ್ರಸ್ತುತ ಇವರು ಸಂಘದ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದರು.**

**ಇವರ ಅಕಾಲಿಕ ನಿಧನಕ್ಕೆ ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಸಂತಾಪ ಸೂಚಿಸಿದ್ದಲ್ಲದೆ, ಪದಾಧಿಕಾರಿಗಳು ಮೃತರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು. ಸಂಘದ ಅಧ್ಯಕ್ಷರು ಸದಸ್ಯರೆಲ್ಲರ ಪರವಾಗಿ ಮೃತರಿಗೆ ಗೌರವಾರ್ಪಣೆ ಸಲ್ಲಿಸಿದರು.**

ಉಡುಪಿ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸ್ಥಾಪಕ ಸದಸ್ಯರಾದ ಡಾ। ಮೂರ್ತಿಯವರು ಸಂಘದಲ್ಲಿ ಜತೆ ಕಾರ್ಯದರ್ಶಿ, ಕಾರ್ಯದರ್ಶಿ ಹಾಗೂ ದೀರ್ಘಕಾಲ ಉಪಾಧ್ಯಕ್ಷರಾಗಿ ಮತ್ತು ಪ್ರಸ್ತುತ ಸಲಹೆಗಾರರಾಗಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಸ್ಥಾನಿಕ ಬ್ರಾಹ್ಮಣ ಸಮಾಜದ ಬಗ್ಗೆ ಅತ್ಯಂತ ಅಭಿಮಾನ ಹೊಂದಿದ್ದ ಇವರು ವೈದಿಕ ಸಂಪ್ರದಾಯ ಹಾಗೂ ಬ್ರಾಹ್ಮಣ್ಯದ ಉಳಿವಿಗಾಗಿ ತಮ್ಮಿಂದಾದ ಪ್ರಯತ್ನಗಳನ್ನು ಮಾಡುತ್ತಿದ್ದರು. ತಮ್ಮ ಸಾತ್ವಿಕಗುಣ, ಪ್ರಾಮಾಣಿಕತೆ ಹಾಗೂ ಪರೋಪಕಾರ ಮನೋಭಾವದಿಂದ ಊರಿನ ಜನರ ಪ್ರೀತಿ ಹಾಗೂ ಗೌರವಕ್ಕೆ ಪಾತ್ರರಾಗಿರುವ ಡಾ। ಸರ್ವಜ್ಞಮೂರ್ತಿಯವರ ನಿಧನದಿಂದಾಗಿ ಜ್ಯೋತಿಷ್ಯ ಮತ್ತು ಆಯುರ್ವೇದ ವೈದ್ಯಕೀಯ ಕ್ಷೇತ್ರಕ್ಕೆ ಅಪಾರ ನಷ್ಟವಾಗಿದೆ.

ಮೃತರು ಪತ್ನಿ, ಪುತ್ರರಾದ ಶ್ರೀ ಗಣೇಶ ರಾವ್, ಡಾ। ಲಕ್ಷ್ಮೀಶ ರಾವ್ ಮತ್ತು ಪುತ್ರಿ ಡಾ। ಸವಿತಾ ಕೃಷ್ಣಪ್ರಸಾದ್ ಸಹಿತ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ. ನಮ್ಮನ್ನಗಲಿದ ಡಾ। ಸರ್ವಜ್ಞಮೂರ್ತಿಯವರ ದಿವ್ಯಾತ್ಮಕ್ಕೆ ಭಗವಂತನು ಚಿರಕಾಲ ಶಾಂತಿಯನ್ನು ನೀಡಲೆಂದು ನಮ್ಮೆಲ್ಲರ ಪ್ರಾರ್ಥನೆ.

**–ಡಾ। ವೈ.ರವೀಂದ್ರನಾಥ ರಾವ್**

## ಪ್ರಭಾರ ಕೋಶಾಧಿಕಾರಿಯಾಗಿ ಬಿ. ಜಯರಾಮರಾವ್



ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕೋಶಾಧಿಕಾರಿಗಳಾದ ಶ್ರೀ ಕೃಷ್ಣಮೂರ್ತಿ ರಾಯರು ವಿದೇಶ ಪ್ರವಾಸದಲ್ಲಿದ್ದು, ಸಂಘದ ಚಟುವಟಿಕೆಗಳನ್ನು ಮುಂದುವರಿಸುವ ಸಲುವಾಗಿ ಪ್ರಭಾರ ಕೋಶಾಧಿಕಾರಿಯಾಗಿ ನಿರ್ದೇಶಕರಾದ ಶ್ರೀ ಬಿ. ಜಯರಾಮ ರಾವ್ ಉಡುಪಿ ಇವರನ್ನು ಆಡಳಿತ ಮಂಡಳಿಯು ಆಯ್ಕೆ ಮಾಡಿರುತ್ತದೆ.

ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಅಧಿಕಾರಿಯಾಗಿರುವ ಶ್ರೀ ಜಯರಾಮರಾಯರು ಕೃಷ್ಣಮೂರ್ತಿರಾಯರ ವಿದೇಶ ನಿರ್ಗಮನದವರೆಗೆ ಕೋಶಾಧಿಕಾರಿಯಾಗಿ ಜವಾಬ್ದಾರಿಯನ್ನು ಸ್ವೀಕರಿಸಿದ್ದಾರೆ.

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ| ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

ಪ್ರಪಂಚದಲ್ಲಿ ಗತಕಾಲದಲ್ಲಿ ನಡೆದ ಘಟನೆಗಳು ಇಂದಿಗೆ ಇತಿಹಾಸವಾಗುತ್ತದೆ ನ್ನುವುದು ಎಲ್ಲರಿಗೂ ತಿಳಿದ ವಿಚಾರ. ಆ ಘಟನೆಗಳ ಬಗ್ಗೆ ಅಂದಂದಿನ ಬರೆಹಗಾರರು-ಪ್ರವಾಸಿ ಬರೆಹಗಾರರು ತಮಗೆ ಕಣ್ಣಿಗೆ ಕಂಡ ಸತ್ಯವನ್ನು ತಮ್ಮ ಅನುಭವಕ್ಕೆ ತಕ್ಕಂತೆ ಬರೆಹದ ಮೂಲಕ ಕೊಟ್ಟಿರುವ ದಾಖಲೆಗಳೇ ಈ ಚರಿತ್ರೆಯ ಅಧ್ಯಯನಕ್ಕೆ ಬೇಕಾದ ವಸ್ತುಗಳೆನ್ನಬಹುದು.


ಬೇರೆ ಬೇರೆ ದೇಶಗಳ ಚರಿತ್ರೆಯ ಅಧ್ಯಯನಕ್ಕೆ ಬೇರೆ ಬೇರೆ ಇತಿಹಾಸ ತಜ್ಞರು ಬರೆದ ಪುಸ್ತಕಗಳ ಆಧಾರವನ್ನು ಇತಿಹಾಸ ತಜ್ಞರು ಉಪಯೋಗಿಸಿಕೊಳ್ಳುತ್ತಾರೆ. ನಮ್ಮ ದೇಶದ ಹಿಂದಿನ ಚರಿತ್ರೆಗಳ ಅಧ್ಯಯನ ಮಾಡುವಾಗಲೂ ಇತಿಹಾಸಕಾರರು ಹಿಂದಣ ಲೇಖಕರ ಕೃತಿಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆಂದು ತಿಳಿದು ಕೊಳ್ಳಬೇಕು.

ಭಾರತದ ಇತಿಹಾಸವು ರಾಮಾಯಣ ಕಾಲದಿಂದಲೇ ಪ್ರಾರಂಭವಾಗಿದೆ-(ಮಹಾಭಾರತದ ಕಥೆಯೂ) ಆದರೂ ಹೆಚ್ಚಿನ ಭಾರತೀಯರಿಗೆ ಇವು ಕೇವಲ ಪುರಾಣ ಕತೆಗಳೇ ಹೊರತು ನೈಜ ಚರಿತ್ರೆ ಎನ್ನುವುದೇ ತಿಳಿಯದು. ಹಾಗೆಯೇ ಆ ಮೇಲಿನ ಎಲ್ಲಾ ರಾಜ ವಂಶಗಳ ಚರಿತ್ರೆ ಎಲ್ಲವುಗಳಿಗೂ ನಮ್ಮ ಚರಿತ್ರೆಗಾರರು (ವಿದೇಶೀ ಬರೆಹಗಾರರೂ) ಸಾಧಾರ ರೀತಿಯಲ್ಲಿ ಕಾಲ ಘಟನೆಗಳ ಉದಾಹರಣೆಗಳನ್ನು ನೀಡಿ ಒಪ್ಪಿಕೊಂಡಿದ್ದಾರೆ. ನಾವು ನಮ್ಮ ತಾತಂದಿರ ಕಾಲದಿಂದಲೂ, ಇಂದಿನವರೆಗೂ ಬರೆದು ದಾಖಲಿಸಲಾದ ಈ ಕೃತಿಗಳನ್ನೇ ಓದುತ್ತೇವೆ; ಶಾಲೆ, ಕಾಲೇಜುಗಳಲ್ಲಿ ಅದನ್ನೇ ವಿದ್ಯಾರ್ಥಿಗಳಿಗೆ ಬೋಧಿಸುತ್ತೇವೆ. ಅದೇ ಸತ್ಯವೆಂದು ತಿಳಿದಿರುತ್ತೇವೆ.

ಭಾರತ ಸ್ವಾತಂತ್ರ್ಯಾನಂತರ ದಿನಗಳಲ್ಲಿ ವಿವೇಕಿಗಳಾದ ಹಲವು ಬರೆಹಗಾರರು ದೇಶದೊಳಗಿನ ಯಾವ ವಿಶ್ವವಿದ್ಯಾನಿಲಯದ ಚೌಕಟ್ಟಿನೊಳಗೂ ಬಾರದೆ ಪೌರ ಸಹಜವಾದ ಸ್ವಾತಂತ್ರ್ಯದಿಂದ ಗ್ರಂಥಗಳ ಪರಿಶೀಲನೆ ನಡೆಸಿ ತಮ್ಮ ಅಭಿಪ್ರಾಯಗಳನ್ನು ಕೃತಿಗಳ ಮೂಲಕ ಸಮಾಜಕ್ಕೆ ಅರ್ಪಿಸಿದ್ದಾರೆ. ಆದರೆ ಅಂಥಹ ಗ್ರಂಥಗಳಲ್ಲಿ ಕೆಲವು ಮಾತ್ರಾ ಪ್ರಕಟಕ್ಕೆ ಬರುವುದಾಗಿದೆ.

ಇಂಥಹ ಗ್ರಂಥಗಳಸಾಲಿನಲ್ಲಿ ಬಾಬು ಕೃಷ್ಣಮೂರ್ತಿಯವರ "ಯಾವುದು ಚರಿತ್ರೆ" (ತೆಲುಗು ಮೂಲ-ಎಂ ವಿ ಆರ್ ಶಾಸ್ತ್ರಿ) ಒಂದು ನಿದರ್ಶನ. ಅವರ ಅಭಿಪ್ರಾಯದಂತೆ ಭಾರತದ ಹಿಂದುತ್ವವನ್ನು ಹೀನ ಶಕ್ತಿಯುಳ್ಳದ್ದೆಂದೂ, ಹಿಂದುಗಳನ್ನು ಚರಿತ್ರೆ ಹೀನರೆಂದೋ ವರ್ಣಿಸಿದ್ದು 'ಘನ ವಿದ್ವಾಂಸ'ರಾದ ನಮ್ಮ ಚರಿತ್ರೆಗಾರರ ದೊಡ್ಡ ಸಾಧನೆಯಾಗಿದೆ. ಮೇಲಿನ ಈ ಪುಸ್ತಕ ಓದುವುದರಿಂದ ಈ ಅಭಿಪ್ರಾಯ ಮೂಡುವುದಲ್ಲದೆ ಈವರೆಗೆ ನಾವು ಓದಿದ ಚರಿತ್ರೆಗಳು 'ಸುಳ್ಳಿನ ಕಂತೆ' ಎನ್ನುವುದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ದೇಶಭಕ್ತ ಭಾರತೀಯರೊಮ್ಮೆ ಈ ಕೃತಿಯನ್ನು ಓದಿಕೊಳ್ಳುವುದು ಲೇಸಲ್ಲವೇ?

# ಕನ್ನಡ ಕವಿಕಾವ್ಯ ಪರಿಚಯ-೧೧ : ಮಹಾಕವಿ ಹರಿಹರ ದೇವ-ಹರಿದಾಸ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಕಳೆದ ಸಂಚಿಕೆಯಿಂದ)

ಈತನ 'ಗಿರಿಜಾ ಕಲ್ಯಾಣ'ದಲ್ಲಿ ಕಂದ ಪದ್ಯಕ್ಕೆ ಉದಾಹರಣೆ :-

*"ಅಕ್ಕಕ್ಕು ಕಾಮಹರನೊಳ್।*
*ಮುಕ್ಕಣ್ಣನೊಳಖಿಳ ವೇದ ಶಾಸ್ತ್ರ ಕ್ರಮಮಂ॥*
*ಮಿಕ್ಕವನೊಳ್ ಪಿತೃವನದೊಳ್।*
*ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗೀ॥"*

ವಟು(ಶಿವ)-ಪಾರ್ವತೀ ಸಂವಾದ ಈ ಕಾವ್ಯದಲ್ಲಿ ವೃತ್ತಗಳಿಂತಲೂ ಕಂದಗಳ ಸಂಖ್ಯೆ ಹೆಚ್ಚು. ಯಮಕ ಪ್ರಾಸ, ಶ್ಲೇಷೆ, ಉಪಮಾರೂಪಕ, ವಕ್ರೋಕ್ತಿ, ಸ್ವಭಾವೋಕ್ತಿ, ಅರ್ಥಾಂತರನ್ಯಾಸ ಮೊದಲಾದ ಅಲಂಕಾರಗಳೆಲ್ಲವೂ ಇವೆ. ನವರಸ ಭರಿತವಾಗಿದ್ದರೂ ಶಾಂತ ಮತ್ತು ಕರುಣ ರಸಗಳು ಪ್ರಮುಖವಾಗಿವೆ. ಕವಿ ರಾಘವಾಂಕನು ಈತನನ್ನು ಕರ್ಣಾಟಕ ಕಾವ್ಯ ಲಕ್ಷಣ ದೀಕ್ಷಾಚಾರ್ಯ, ಶಿವಯೋಗ ಚಕ್ರೇಶ್ವರ, ಮರ್ತ್ಯಲೋಕದ ಮಹಾದೇವ ಎಂದಿರುವನು. ಕವಿ ಷಡಕ್ಷರನು ಈತನನ್ನು 'ಮೃದು ಮಧುರಪದವಿಲಾಸಾಸ್ವದ ರಸವಿರಸ ಪ್ರಕಾಶ ಕರ್ಣಾಟಕ ಕವಿತ್ವದೊಳೊರ್ವನೆ ಪೆಸರ್ವಡೆದಗ್ಗದ ಹರಿಹರ' ಎಂದಿರುವನು.

ಶಿವನ ಪಂಚವಿಂಶತಿ ಲೀಲೆಗಳಲ್ಲಿ 'ವೈವಾಹಿಕ ಲೀಲೆ' ಎಂಬುದು ಒಂದು. ಹರಿಹರನು ಗಿರಿಜಾಕಲ್ಯಾಣದ ಕತೆಯನ್ನು ಇದರಿಂದ ತೆಗೆದುಕೊಂಡಿರುವನು. ಸ್ಕಾಂದ ಪುರಾಣ, ಶಿವಪುರಾಣಗಳಲ್ಲಿ ಈ ಕತೆ ಬರುತ್ತದೆ, ಕಾಳಿದಾಸನ "ಕುಮಾರ ಸಂಭವ"ದಿಂದಲೂ ವಿಷಯಗಳನ್ನು ಹರಿಹರನು ಆಯ್ದುಕೊಂಡಿರುವನು. ಕಾಳಿದಾಸನ ಶಿವನು ಹಿಮಾಲಯ ದವನಾದರೆ ಹರಿಹರನ ಶಿವನು ಹಂಪೆಯ ವಿರೂಪಾಕ್ಷ. ದಕ್ಷ ಬ್ರಹ್ಮನ ಯಾಗದ ಸಂದರ್ಭದಲ್ಲಿ ಆತ್ಮಾರ್ಪಣೆ ಮಾಡಿಕೊಂಡ ದಾಕ್ಷಾಯಿಣಿ (ಸತೀದೇವಿ)ಯು ತನ್ನ ಮರುಜನ್ಮದಲ್ಲಿ ಹಿಮವಂತನ ಪುತ್ರಿಯಾಗಿ ಜನಿಸಿ ಶಿವನನ್ನು ಅರ್ಚಿಸಿ, ತಪಮಿರ್ದು, ಮೆಚ್ಚಿಸಿ ಅವನನ್ನು ವಿವಾಹವಾದ ಕತೆಯು ಸವಿಸ್ತಾರವಾಗಿ ವರ್ಣಿತವಾಗಿದೆ. ತಾರಕಾಸುರನೆಂಬ ರಕ್ಕಸನ ಉಪಟಳ, ಅವನ ಸಂಹಾರಕ್ಕಾಗಿ ಶಿವನು ಪುತ್ರನನ್ನು ಪಡೆಯಲು, ಅವನು ವಿವಾಹವಾಗುವಂತೆ, ತಪಮಿರ್ದ ಶಿವನನ್ನೆಚ್ಚರಿಸಲು ಬಂದ ಕಾಮನದಹನ, ರತಿಯ ವಿಲಾಪ, ಪಾರ್ವತಿಯ ತಪಸ್ಸು ಇತ್ಯಾದಿಗಳು ಹೃದಯಂಗಮನಾಗಿ ಇದರಲ್ಲಿ ವರ್ಣಿಸಲ್ಪಟ್ಟಿವೆ. ಕೊನೆಯದಾಗಿ, ಪಾರ್ವತಿಯು ಶಿವನನ್ನು ವೈಭವದಿಂದ ವಿವಾಹವಾದಳು. ಮುಂದೆ ಜನಿಸುವ ಕುಮಾರ (ಷಣ್ಮುಖ)ನು ಹುಟ್ಟಿ ಏಳೇ ದಿನಗಳಲ್ಲಿ ತಾರಕಾಸುರನನ್ನು ಸಂಹರಿಸಿ ಲೋಕಕ್ಕೆ ಸುಭಿಕ್ಷೆಯನ್ನುಂಟು ಮಾಡಿದನು.

ಆದರೆ ಈ ಕತೆಯ ಗೋಜಿಗೆ ಹರಿಹರನು ಹೋಗುವುದಿಲ್ಲ. ಅವನ ಉದ್ದೇಶ ಕೇವಲ ಗಿರಿಜೆಯ ಕಲ್ಯಾಣ ಮಾತ್ರ

ಒಟ್ಟಿನಲ್ಲಿ ಕವಿಹರಿಹರನು ಶಿವಭಕ್ತ ನಾಗಿದ್ದು ಶಿವನ ವೈವಾಹಿಕ ಲೀಲೆಯನ್ನು 'ಗಿರಿಜಾಕಲ್ಯಾಣ'ದಲ್ಲೂ, ಶಿವಶರಣರ ಲೀಲೆಗಳನ್ನು ಇತರ ಕೃತಿಗಳಲ್ಲೂ ಹೃದಯಂಗಮವಾಗಿ ವರ್ಣಿಸಿ, ಮಹಾ ಕವಿಯೆನಿಸಿ, ಕನ್ನಡ ಸಾಹಿತ್ಯ ಲೋಕದಲ್ಲಿ ಧ್ರುವ ತಾರೆಯಂತೆ ಬೆಳಗುವ ಬೆಳ್ಳಿ ಚುಕ್ಕಿಯಾಗಿರುವನು. ಒಟ್ಟು ಹತ್ತು ಆಶ್ವಾಸಗಳು 'ಗಿರಿಜಾ ಕಲ್ಯಾಣ'ದಲ್ಲಿದ್ದು ಕಾವ್ಯವು 'ಸರ್ವಜನ ಸೇವ್ಯ'ವಾಗಿದೆ.

"ಜಯ ಗಿರಿಜಾಧವ'

## ಋಕ್‌ಸಂಹಿತಾ ಯಾಗಸಮಿತಿ
### ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ,
ಉದಯಾದ್ರಿ ಮಠ, ಪಡುಬಿದ್ರೆ

**ವಿಜ್ಞಾಪನೆ**

ಮಾನ್ಯರೇ, ದಿನಾಂಕ: 03-09-2014

ಸಮಸ್ತ ಸಮಾಜ ಬಾಂಧವರ ಶ್ರೇಯೋಭಿವೃದ್ಧಿಯ ಸಂಕಲ್ಪದಲ್ಲಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಉದಯಾದ್ರಿ ಮಠ, ಪಡುಬಿದ್ರೆಯಲ್ಲಿ ದಿನಾಂಕ 26-10-2014ರಿಂದ ದಿನಾಂಕ 02-11-2014ರವರೆಗೆ ಪರಮಪೂಜ್ಯ ಶ್ರೀಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಪೂರ್ಣಾನುಗ್ರಹದೊಂದಿಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಋಕ್‌ಸಂಹಿತಾ ಯಾಗವನ್ನು ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ನಡೆಸುವುದೆಂದು ನಿಶ್ಚಯಿಸಲಾಗಿದೆ. ಇದೇ ಸಂದರ್ಭದಲ್ಲಿ ಸಮಾಜದ ಎಲ್ಲಾ ವೈದಿಕರನ್ನು ಸೇರಿಸಿಕೊಂಡು ಶ್ರೀ ಮಹಾಗಣಪತಿ ಹೋಮ ಮುಂತಾದ ಪಂಚಾಯತನ ದೇವತೆಗಳ ಸಂಬಂಧಿ ಹೋಮಗಳನ್ನು ನಿತ್ಯ ನಡೆಸುವುದೆಂದು ನಿರ್ಧರಿಸಲಾಗಿದೆ.

ಪ್ರಥಮ ದಿನ ಪರಮಪೂಜ್ಯ ಶ್ರೀಶ್ರೀ ಮಾಧವಾಶ್ರಮ ಸ್ವಾಮಿಗಳ ದಿವ್ಯ ಉಪಸ್ಥಿತಿಯಲ್ಲಿ ವೈದಿಕ ಸಮ್ಮೇಳನ ಹಾಗೂ ಕೊನೆಯ ದಿನ ಶ್ರೀಶ್ರೀ ಶಂಕರಭಾರತೀ ಸ್ವಾಮಿಗಳ ದಿವ್ಯ ಉಪಸ್ಥಿತಿಯಲ್ಲಿ ಯಾಗ ಪೂರ್ಣಾಹುತಿ ಹಾಗೂ ಸಮಾರೋಪ ಸಭೆ ನಡೆಯಲಿದೆ. ಇದಲ್ಲದೆ ಪ್ರತೀದಿನ ಮಧ್ಯಾಹ್ನ ಮಹಾಪೂಜೆ, ಬ್ರಾಹ್ಮಣ ಸುಹಾಸಿನಿ ಆರಾಧನೆ ಹಾಗೂ ಸಂಜೆ ಸಾಮೂಹಿಕ ಲಲಿತಾ/ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ಅಷ್ಟಾವಧಾನ ಸೇವೆ, ಪೂಜೆ ಹಾಗೂ ಬ್ರಾಹ್ಮಣ ಸುಹಾಸಿನಿ ಆರಾಧನೆ ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತನು-ಮನ-ಧನ ಸಹಕಾರವನ್ನು ನೀಡಬೇಕಾಗಿ ವಿನಂತಿ.

| ಶ್ರೀ ಎಮ್.ಆರ್. ವಾಸುದೇವ | ಶ್ರೀ ಕರುಣ್ ರಾವ್ ಬೆಳ್ಳೆ | ಶ್ರೀ ಸುಧಾಕರ್ ಬೆಳ್ಳೆ |
|---|---|---|
| ಅಧ್ಯಕ್ಷ | ಕಾರ್ಯದರ್ಶಿ | ಖಜಾಂಚಿ |

**ತಾವು ಪ್ರಾಯೋಜಿಸಬಹುದಾದ ಕಾರ್ಯಕ್ರಮಗಳು :**

| | | |
|---|---|---|
| 1. | ಸಂಹಿತಾ ಯಾಗದ ಒಂದು ಅಧ್ಯಾಯ | ರೂ.5,000/- |
| 2. | ಶ್ರೀ ನವಗ್ರಹ ಹೋಮ | ರೂ.5,000 /- |
| 3. | ಶ್ರೀ ಮಹಾಗಣಪತಿ ಹೋಮ | ರೂ.5,000 /- |
| 4. | ಶ್ರೀ ದುರ್ಗಾ ಹೋಮ | ರೂ.5,000 /- |
| 5. | ಶ್ರೀ ಸ್ವಯಂವರ ಪಾರ್ವತಿ ಹೋಮ | ರೂ.5,000 /- |
| 6. | ಶ್ರೀ ರುದ್ರ ಹೋಮ | ರೂ.5,000 /- |
| 7. | ಶ್ರೀ ಶತಮೋದಕ ಹೋಮ | ರೂ.5,000 /- |
| 8. | ಶ್ರೀ ಹೇರಂಬ ಗಣಪತಿ ಹೋಮ | ರೂ.5,000 /- |
| 9. | ಶ್ರೀ ಸುಬ್ರಹ್ಮಣ್ಯ ಹೋಮ | ರೂ.5,000 /- |
| 10. | ಶ್ರೀ ಮೃತ್ಯುಂಜಯ ಹೋಮ | ರೂ.5,000 /- |
| 11. | ಬ್ರಾಹ್ಮಣ ಸುಹಾಸಿನಿ ಆರಾಧನೆ 1 ದಿನ | ರೂ.10,000 /- |
| 12. | ಬ್ರಾಹ್ಮಣ ಸುಹಾಸಿನಿ ಆರಾಧನೆ 1 ಹೊತ್ತು | ರೂ.5,000 /- |
| 13. | ಋಕ್ ಸೂಕ್ತ ಹೋಮ | ರೂ.500/- |
| 14. | ಸಭಾಮಂಟಪದ ಒಂದು ಚದರ ಅಡಿ | ರೂ.1,000/- |

# ಗಣೇಶ ವಿಗ್ರಹ ರಚನೆಕಾರ ರತ್ನಾಕರ ರಾಯರು

ಮೂಡುಬಿದಿರೆ ದೊಡ್ಮನೆ ರಸ್ತೆಯ ಶ್ರೀ ಚಂದ್ರಶೇಖರ ದೇವಾಲಯದ ಅರ್ಚಕ ಮೊಕ್ತೇಸರರಾದ ಶ್ರೀ ರತ್ನಾಕರ ರಾವ್‌ರವರು 1988ರಲ್ಲಿ ದೇವಾಲಯದಲ್ಲಿ ಚೌತಿಯಂದು ಗಣಪತಿಯನ್ನಿಟ್ಟು ಪೂಜಿಸುವ ಉದ್ದೇಶದಿಂದ ಸ್ವತ: ಕೈಯಾರೆ ಗಣಪತಿ ರಚಿಸಲು ಪ್ರಾರಂಭಿಸಿದರು. ಹೀಗೆ ಮೂರ್‍ನಾಲ್ಕು ವರ್ಷಗಳ ತರುವಾಯ ಇವರು ರಚಿಸಿದ ವಿಗ್ರಹವನ್ನು ಕಂಡು ಸಂತಸಗೊಂಡ ಸ್ಥಳೀಯರ ಆಗ್ರಹಕ್ಕೆ ಕಟ್ಟುಬಿದ್ದು ಸಾರ್ವಜನಿಕರಿಗೂ ವಿಗ್ರಹ ಮಾಡಿಕೊಡಲು ಪ್ರಾರಂಭಿಸಿದರು. ಪ್ರತೀ ವರ್ಷವೂ ಒಂದೊಂದು ವಿಗ್ರಹದಂತೆ ಹೆಚ್ಚಾಗುತ್ತಾ ಮುಂದುವರೆದು ಕಳೆದ 4 ವರ್ಷದಿಂದ 13 ವಿಗ್ರಹಗಳು ರಚನೆಗೊಳ್ಳುತ್ತಿವೆ.



ಇವರು ಮಾಡಿದ ವಿಗ್ರಹಗಳಿಗೆ ಪ್ರತೀ ವರ್ಷವೂ ವಿವಿಧ ಆಭರಣ ಹೆಚ್ಚುತ್ತಿರುವುದು ಸಾರ್ವಜನಿಕರಿಗೂ ಸಂತಸ ತಂದಿದೆ. ಇದೇ ರತ್ನಾಕರರಾಯರಿಗೆ ಆತ್ಮ ತೃಪ್ತಿ ತಂದಿದೆ.

ಅಂತೂ ನಮ್ಮವರೊಬ್ಬರು ಬಹಳ ನಯ, ನಾಜೂಕಿನ ಗಣಪತಿ ವಿಗ್ರಹ ರಚನೆಯ ಕಾರ್ಯದಲ್ಲೂ ಸಿದ್ಧ ಹಸ್ತರೆಂದು ಹೇಳಿಕೊಳ್ಳಲು ಸಂತಸವಾಗುತ್ತದೆ. ಇವರು ಬಹಳ ಮಡಿವಂತಿಕೆಯಿಂದ ಈ ವಿಗ್ರಹವನ್ನು ರಚಿಸುತ್ತಿರುವುದೂ ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಹೀಗಾಗಿ ದೇವಾಲಯದ ಅರ್ಚಕತನದೊಂದಿಗೇ ವಿವಿಧ ಸಮಾಜಮುಖಿ-ಧಾರ್ಮಿಕ ಕಾರ್ಯದಲ್ಲಿ ತೊಡಗಿರುವ ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯ ನೆಮ್ಮದಿ ದೊರಕಿ ಸಂತೃಪ್ತಿ ತುಂಬಲೆಂದು ಹಾರೈಸುತ್ತೇವೆ.


ಸಚಿತ್ರ ವರದಿ: **ರಾಯೀರಾಜಕುಮಾರ್, ಮೂಡುಬಿದಿರೆ**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ| ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಶ್ರೀ ಪ್ರಫುಲ್ಲಚಂದ್ರರಾವ್ ಉಡುಪಿ, ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು ಆರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.





॥ ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ ॥

## ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ಜಯ ನಾಮ ಸಂವತ್ಸರದ ಕನ್ಯಾ ಮಾಸ ದಿನ ೧೮ ಸಲುವ ಅಶ್ವಯುಜ ಶುದ(ದಶಮಿ) ೧೦ ಯು, ತಾ.04-10-2014ನೇ ಶನಿವಾರ

ವಿಜಯದಶಮಿ ದಿನದಂದು

## ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

**ಪ್ರಫುಲ್ಲಚಂದ್ರ ರಾವ್**
ಅಧ್ಯಕ್ಷರು

**ಯು. ಅರವಿಂದ ಕುಮಾರ್**
ಕಾರ್ಯದರ್ಶಿ

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

ವಿ.ಸೂ. : ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು.

**ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.**

---

**ಶ್ರೀಶಾರದಾ ದೇವಸ್ಥಾನ,** ಶ್ರೀಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.25-09-2014ರಿಂದ 03-10-2014ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

– ಆಡಳಿತ ಮಂಡಳಿ

---

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು

**ತಾ.04-10-2014ನೇ ಶನಿವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ**

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಪ್ರಕೃತಿಯ ಚಿತ್ರ-Scenary) | 5-7ನೇ ತರಗತಿಯವರೆಗೆ (ಹಕ್ಕಿ ಪ್ರಪಂಚ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಹಬ್ಬ ಅಥವಾ ಜಾತ್ರೆ) | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 7ನೇ ತರಗತಿಯವರೆಗೆ (ಭಗವದ್ಗೀತೆಯ 15ನೇ ಅಧ್ಯಾಯದ ಮೊದಲ 10 ಶ್ಲೋಕಗಳು) | | 8ನೇ ತರಗತಿಯಿಂದ ಮೇಲ್ಪಟ್ಟು ಶ್ರೀಶಾರದಾಭುಜಂಗಪ್ರಯಾತಸ್ತೋತ್ರಂ | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| **ಬೆಂಕಿ ಉಪಯೋಗಿಸದೆ ಆಹಾರ ತಯಾರಿ** (ಮುಕ್ತ ಅವಕಾಶ) | ಬೇಕಾದ ಸಾಮಗ್ರಿಗಳನ್ನು ಸ್ಪರ್ಧಿಗಳೇ ತರಬೇಕು ಹಾಗೂ ಪೂರ್ವತಯಾರಿ ಸ್ಥಳದಲ್ಲೇ ಮಾಡಬೇಕು. | | | 30 ನಿಮಿಷ |
| **ಕನ್ನಡ ಆಶು-ಭಾಷಣ** ವಿದ್ಯಾರ್ಥಿಗಳಿಗೆ | 8ನೇ ತರಗತಿಯಿಂದ 10ನೇ ತರಗತಿಯವರೆಗೆ | | ಪದವಿಪೂರ್ವ ಮತ್ತು ಪದವಿ ತರಗತಿಯವರೆಗೆ | 3 ನಿಮಿಷ |
| **ಹಸೆಮಣೆ/ಶೋಭಾನೆ ಹಾಡುಗಳು** | 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ | | | |

**ವಿಶೇಷ ಸೂಚನೆಗಳು :**

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

**ಮಧ್ಯಾಹ್ನದ ಭೋಜನಾ ನಂತರ ಸಮಾಜ ಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮ**

**ಶ್ರೀಶಾರದಾ ಹವ್ಯಾಸಿ ಯಕ್ಷ ಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ**

**''ವೀರ ವೃಷಸೇನ-ಶಶಿಪ್ರಭಾ ಪರಿಣಯ'' ಸಮಯ: ಸಂಜೆ 6-00ರಿಂದ 9-00**

# ಶ್ರೀ ಶಾರದಾ ಮಂಟಪದಲ್ಲಿ ಆಟಿಡೊಂಜಿದಿನ ಆಚರಣೆ



ಆಗಸ್ಟ್ 15ರಂದು ಶ್ರೀ ಶಾರದಾ ಮಂಟಪದಲ್ಲಿ ಮಹಿಳಾ ವೇದಿಕೆಯ ವತಿಯಿಂದ ಆಟಿಡೊಂಜಿದಿನ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯು "ವಂದೇ ಮಾತರಂ" ಗೀತೆಯೊಂದಿಗೆ ಪ್ರಾರಂಭಗೊಂಡಿತು.

ಕುಮಾರಿಯವರಾದ ವೃಂದಾ ಕೆ.ರಾವ್, ಪ್ರಿಯಾರಾವ್ ಮತ್ತು ವಿಭಾ.ವಿ.ರಾವ್ ಗೀತೆಯನ್ನು ಶುಶ್ರಾವ್ಯವಾಗಿ ಹಾಡಿದರು. ಪಡುಬಿದ್ರೆ ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ವೇದಾ ಡಿ. ಅವರು ದೀಪಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ವಯೋಮಿತಿಗನುಗುಣವಾಗಿ ವಿವಿಧ ಸಾಂಪ್ರದಾಯಿಕ ಆಟಗಳ ಚಟುವಟಿಕೆಗಳು ಪ್ರಾರಂಭಗೊಂಡವು. ಆಟಗಳು ಮತ್ತು ವಿಜೇತರ ವಿವರ ಈ ಕೆಳಗಿನಂತಿದೆ.

**60 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಚನ್ನಮಣೆ ಆಟ–** ಶ್ರೀಮತಿ ತುಳಸಿ ವಾಸುದೇವ ರಾವ್, ಬೆಳ್ಮಣ್ಣು ಮತ್ತು ಶ್ರೀಮತಿ ಶೋಭಲತಾ ರಾವ್ ಅಲೆವೂರು. **40–59 ವರ್ಷದ ಮಹಿಳೆಯರಿಗೆ ಗಜ್ಜುಗ ಆಟ–** ಶ್ರೀಮತಿ ಗೀತಾ ಕೃಷ್ಣಕುಮಾರ್ ಮಟ್ಟು ಮತ್ತು ಶ್ರೀಮತಿ ಮಹಾಲಕ್ಷ್ಮಿ ಶ್ಯಾನುಭಾಗ್, ಅಂಬಲಪಾಡಿ. **20–39 ವರ್ಷದ ಮಹಿಳೆಯರಿಗೆ ಕುಂಟೆಬಿಲ್ಲೆ ಆಟ**–ಶ್ರೀಮತಿ ರಮ್ಯಾರಾವ್, ಕುತ್ಪಾಡಿ ಮತ್ತು ಶ್ರೀಮತಿ ಪ್ರೀತಿ.ಎಸ್.ರಾವ್. ಚಿಟ್ಪಾಡಿ. **10–19 ವರ್ಷದ ಮಕ್ಕಳಿಗೆ ಲಗೋರಿ ಆಟ**–ಕುಮಾರಿ ವಿಭಾ.ವಿ.ರಾವ್, ಕುಮಾರಿ ಕೃತಿ.ಎಸ್.ಎ. ಮತ್ತು ಕುಮಾರ ಕೀರ್ತಿವರ್ಧನ್. **9 ವರ್ಷಕ್ಕೆ ಕೆಳಪಟ್ಟ ಮಕ್ಕಳಿಗೆ ಟೊಪ್ಪಿ ಆಟ–** ಕುಮಾರಿಯವರಾದ ಕೃತಿ ಎಸ್.ಎ. ಮತ್ತು ರಚನಾ ರಾವ್.ಕೆ. **ಪುರುಷರಿಗೆ ಗೋಣಿಚೀಲ ಓಟ**–ಶ್ರೀ ಪವನ್ ಕುಮಾರ್ ಮತ್ತು ಶ್ರೀ ವಾಗೀಶ್ ರಾವ್. **ಮಡಕೆ ಒಡೆಯುವುದು–** ಶ್ರೀ ಸುರೇಶ್ ರಾವ್ ಕುತ್ಪಾಡಿ ಮತ್ತು ಶ್ರೀ ಅಜಿತ್ ಕುಮಾರ್.

ಅನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಸುನೀತ ರಾವ್ ಸರ್ವರನ್ನು ಸ್ವಾಗತಿಸಿದರು. ಮುಖ್ಯ ಅತಿಥಿಗಳಾದ ಶ್ರೀ ಮ.ನಾ.ಹೆಬ್ಬಾರ್ ಆಟಿಯ ವಿಶೇಷತೆ ಬಗ್ಗೆ ಎಲ್ಲರ ಗಮನ ಸೆಳೆದರು. ಶ್ರೀಮತಿ ವೇದಾ.ಡಿ ರಾವ್ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವಿಜೇತರಿಗೆ ಹೂ ನೀಡಿ ಗೌರವಿಸಲಾಯಿತು. ವಿಜೇತರ ಯಾದಿಯನ್ನು ಶ್ರೀಮತಿ ಜಯಲಕ್ಷ್ಮೀ ಮುರಳೀಕೃಷ್ಣ ರಾವ್ ಅವರು ಓದಿದರು. ವೇದಿಕೆಯಲ್ಲಿ, ಸಂಘದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್, ಖಜಾಂಚಿ ಶ್ರೀ ಕೃಷ್ಣಮೂರ್ತಿ ರಾವ್, ಕಾರ್ಯದರ್ಶಿ ಶ್ರೀ ಅರವಿಂದ್ ಕುಮಾರ್, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಜಯಲಕ್ಷ್ಮಿ ಮುರಳೀಧರ್ ರಾವ್, ವೇದಿಕೆಯ ಸಂಚಾಲಕಿ ಶ್ರೀಮತಿ ಪ್ರೀತಿ ಎಸ್.ರಾವ್ ಹಾಗೂ ಮುಖ್ಯ ಅತಿಥಿಗಳಾದ ಶ್ರೀ ಮ.ನಾ.ಹೆಬ್ಬಾರ್ ಮತ್ತು ಶ್ರೀಮತಿ ವೇದಾ.ಡಿ. ಉಪಸ್ಥಿತರಿದ್ದರು. ಶ್ರೀಮತಿ ಪ್ರೀತಿ ಎಸ್.ರಾವ್ ಧನ್ಯವಾದ ಸಮರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ದೇಶದ ಸ್ವಾತಂತ್ರ್ಯ ದಿನಾಚರಣೆಗೆ ಗೌರವವನ್ನೂ ಸೂಚಿಸುವುದರ ಮೂಲಕ ಸಮಾರೋಪ ಕೊನೆಗೊಂಡಿತು. ನಂತರ ಎಲ್ಲರೂ ಆಟಿಯ ವಿಶೇಷ ಖಾದ್ಯಗಳನ್ನು ಸವಿದರು.

# ಉಡುಪಿಯಲ್ಲಿ ಉಪಾಕರ್ಮ



ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ದಿನಾಂಕ 07-09-2014ರಂದು ವೈದಿಕರಾದ ಶ್ರೀ ಪಾವಂಜೆ ರವಿ ಉಪಾಧ್ಯಾಯ ಮತ್ತು ನಾಗರಾಜ ಭಟ್ ಇವರ ಪೌರೋಹಿತ್ಯದಲ್ಲಿ ಋಗುಪಾಕರ್ಮವು ನೆರವೇರಿತು. ಕುತ್ಪಾಡಿ ಸುರೇಶ್ ರಾವ್ ಕರ್ತೃಗಳಾಗಿದ್ದು, ನೂತನ ವಟುಗಳು ಹಾಗೂ ಹೆಚ್ಚಿನ ಸಮಾಜಬಾಂಧವರು ಉಪಾಕರ್ಮದಲ್ಲಿ ಭಾಗವಹಿಸಿದರು. ಬೆಳಿಗ್ಗೆ 10-30ಕ್ಕೆ ಪ್ರಾರಂಭಗೊಂಡ ಈ ಕಾರ್ಯಕ್ರಮವು ಮಧ್ಯಾಹ್ನ 1-00 ಗಂಟೆಗೆ ಮುಕ್ತಾಯಗೊಂಡು, ಆಗಮಿಸಿದ ಎಲ್ಲರೂ ಬ್ರಾಹ್ಮಣ ಸುಹಾಸಿನಿ ಆರಾಧನೆಯಲ್ಲಿ ಪಾಲ್ಗೊಂಡರು. ಉಪಾಕರ್ಮದಲ್ಲಿ ಪಾಲ್ಗೊಂಡು ಸಹಕರಿಸಿದ ಎಲ್ಲರಿಗೂ ಸಂಘದ ಕಾರ್ಯದರ್ಶಿಗಳು ಕೃತಜ್ಞತೆ ಸಲ್ಲಿಸಿದ್ದಾರೆ.

# "ಧರ್ಮಾಚರಣೆಯಿಂದ ಮಾತ್ರ ಜೀವನ ಸಾರ್ಥಕ"

*–ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು*




ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಚಾತುರ್ಮಾಸ ಕೈಗೊಂಡ ಸಮಯದಲ್ಲಿ ಸ್ಥಾನಿಕ ಸಮಾಜಬಾಂಧವರು ಒಟ್ಟಾಗಿ ತೆರಳಿ ಗುರುಗಳ ದರ್ಶನ, ಆಶೀರ್ವಚನ ಪಡೆದು ಹೊರೆಕಾಣಿಕೆ ನೀಡಿ ಫಲ ಮಂತ್ರಾಕ್ಷತೆ ಪಡೆದು ಧನ್ಯರಾಗಿ ಬರುವಂತಹ ಕ್ರಮ ಕಳೆದ ಹಲವಾರು ವರ್ಷಗಳಿಂದ ನಡೆದು ಬಂದಿರುವ ಸಂಪ್ರದಾಯ. ಗುರುವರ್ಯರು ಮುಂಬೈ, ಚೆನ್ನೈಗಳಲ್ಲಿ ಚಾತುರ್ಮಾಸ ಕೈಗೊಂಡಾಗಲೂ ಸ್ಥಾನಿಕ ಸಮಾಜದವರು ಭಕ್ತಿ ಪೂರ್ವಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ ತೆರಳಿ ತಮ್ಮ ಗುರುಭಕ್ತಿಯನ್ನು ಮೆರೆದಿದ್ದರು. ಈ ಬಾರಿ ಶ್ರೀ ಸುಬ್ರಹ್ಮಣ್ಯ ಸಭಾದಿಂದ 24.08.2014ರಂದು ಒಂದು ಬಸ್ಸು ಹಾಗೂ ಒಂದು ಮಿನಿ ಬಸ್ಸುಗಳಲ್ಲಿ ಹೊರೆಕಾಣಿಕೆಯನ್ನು ಹೇರಿಕೊಂಡು ಸುಮಾರು 85ರಷ್ಟು ಭಕ್ತರು 6.30ಕ್ಕೆ ಹೊರಟರು. ಮಿನಿ ಬಸ್ಸು ಶ್ರೀ ಕರುಣರಾವ್ ಬೆಳ್ಳೆಯವರ ನೇತೃತ್ವದಲ್ಲಿ ಸಮಾಜ ಬಾಂಧವರನ್ನು ದಾರಿಯಲ್ಲಿ ಹತ್ತಿಸಿಕೊಂಡು ಸಾಗಿದರೆ, ಉಳಿದವರು ಶ್ರೀ ಅನಿಲ್ ರಾವ್ ಬಿ.ಎಸ್., ನೇತೃತ್ವದಲ್ಲಿ ಇನ್ನೊಂದು ಬಸ್ಸಿನಲ್ಲಿ ತೆರಳಿದರು. ಸಮಯ ಕಳೆಯುವುದಕ್ಕಾಗಿ ಸರದಿಯಂತೆ ಭಕ್ತಿಗೀತೆ ಕಾರ್ಯಕ್ರಮ ನಡೆಸಿಕೊಡಲು ವಿನಂತಿಸಿದಾಗ ಉತ್ಸಾಹದಿಂದ ಸದಸ್ಯರು ಮುಂದೆ ಬಂದು ಸೊಗಸಾಗಿ ಹಾಡಿ ಭಕ್ತಿಯನ್ನು ಪ್ರದರ್ಶಿಸಿದರು. ಭಕ್ತಿಗೀತೆಯಲ್ಲಿ ಸದಸ್ಯರು ಎಷ್ಟು ತನ್ಮಯರಾದರೆಂದರೆ ಬಸ್ಸು ಕಾಫಿ, ತಿಂಡಿಗಾಗಿ ನಂದಿಕೂರು ಶ್ರೀ ಜನಾರ್ದನರಾಯರ ಮನೆಯಲ್ಲಿ ನಿಲ್ಲಿಸದೇ ಸುಮಾರು 1 ಕಿ.ಮೀ. ಮುಂದೆ ಚಲಿಸಿ ಆಗಿತ್ತು. ಮತ್ತೆ ಹಿಂದೆ ಬಂದು ಶ್ರೀ ಜನಾರ್ದನರಾಯರ ಮನೆಗೆ ತಲುಪಿದಾಗ ಅವರು ಹಾಗೂ ಅವರ ಮನೆಯವರು ನಮ್ಮನ್ನು ಹಾರ್ದಿಕವಾಗಿ ಸ್ವಾಗತಿಸಿ, ಸಕಲ ವ್ಯವಸ್ಥೆಯನ್ನು ಮಾಡಿಕೊಟ್ಟರು. ಭರ್ಜರಿ ಇಡ್ಲಿ, ಸಾಂಬಾರ್, ಚಟ್ನಿ, ಶೀರ ಸವಿದ ಸದಸ್ಯರು ಚಾ, ಕಾಫಿ ಕುಡಿದು ಉತ್ಸುಕತೆಯನ್ನು ತುಂಬಿಕೊಂಡರು. ಮನೆಯವರಿಗೆ ಕೃತಜ್ಞತೆ ಸಲ್ಲಿಸಿ ಮುಂದುವರಿದ ಪ್ರಯಾಣವು ಭಕ್ತಿಗೀತೆ, ಹಾಸ್ಯ, ಅನುಭವದ ಮಾತು ಧ್ವನಿವರ್ಧಕದಲ್ಲಿ ಮಾರ್ದನಿಸಿತು. ಸುಮಾರು 10.30ಕ್ಕೆ ಶೃಂಗೇರಿ ತಲುಪಿದಾಗ ಯುವ ವೇದಿಕೆಯ ಕಾರ್ಯದರ್ಶಿ ಶ್ರೀ ಸುರೇಶ್ ಕಡಬರವರು ತಮ್ಮ ತಂಡದೊಂದಿಗೆ ಹೊರೆಕಾಣಿಕೆಯನ್ನು ಗುರುಸದನಕ್ಕೆ ಮುಟ್ಟಿಸುವ ಹೊಣೆ ಹೊತ್ತರು. ಇತರರು ಶೃಂಗೇರಿ ಶಾರದಾಂಬೆಯ ದರ್ಶನಕ್ಕಾಗಿ ತೆರಳಿದರು. ಮತ್ತೆ ಎಲ್ಲರೂ ಗುರುಸದನಕ್ಕೆ ತಲುಪಿದಾಗ ಗುರುಗಳು ಅದಾಗಲೇ ಆಸೀನರಾಗಿ ಭಕ್ತರಿಗೆ ದರ್ಶನ ನೀಡುತ್ತಿದ್ದರು. ಹಲವು ಊರುಗಳಿಂದ ಬಂದಿರುವ ಸಮಾಜ ಬಾಂಧವರು ಸಂತೋಷ, ಉಲ್ಲಾಸದಿಂದ ತಮ್ಮ ತಮ್ಮ ಬಂಧುಗಳೊಡನೆ ಉಭಯ ಕುಶಲೋಪರಿಯಲ್ಲಿ ನಿರತರಾಗುತ್ತಾ ಗುರುಗಳ ಆಶೀರ್ವಚನಕ್ಕಾಗಿ ಭಕ್ತಿಯಿಂದ ಕಾಯತೊಡಗಿದರು. ಮುಂದೆ ಚಂದ್ರಮೌಳೀಶ್ವರ ದೇವರಿಗೆ ಆರತಿ ಬೆಳಗುತ್ತಿದ್ದಂತೆ ನೆರೆದಿದ್ದ ಭಕ್ತರು ಶ್ರದ್ಧೆಯಿಂದ ಪೂಜೆ ವೀಕ್ಷಿಸುತ್ತಾ ಧನ್ಯರಾದರು. ಪೂಜೆಯ ಬಳಿಕ ಆಶೀರ್ವಚನ ನೀಡುತ್ತಾ ಶ್ರೀ ಗುರುಗಳು "ಸಂಪತ್ತು ಗಳಿಸುವುದರಿಂದ, ಹೆಸರು ಮಾಡುವುದರಿಂದ ಯಶಸ್ಸು ಪ್ರಾಪ್ತಿಯಾಗುತ್ತದೆ ಎಂದು ಕೆಲವರು ತಿಳಿದಿದ್ದಾರೆ. ಆದರೆ ಆ ಯಶಸ್ಸು ಕೇವಲ ತಾತ್ಕಾಲಿಕ. ಕೇವಲ ಧರ್ಮಾಚರಣೆಯಿಂದ ಮಾತ್ರ ಮನುಷ್ಯ ಸುಖ, ಸಂತೃಪ್ತಿ ಪಡೆಯುತ್ತಾನೆ. ಶಂಕರ ಭಗವತ್ಪಾದರು ಸಹ ಇದನ್ನೇ ನಮಗೆ ಬೋಧಿಸಿದ್ದಾರೆ. ಹಾಗಾಗಿ ನೀವೆಲ್ಲರೂ ಧರ್ಮಾಚರಣೆಯನ್ನು ನಡೆಸಿಕೊಂಡು ಬಂದರೆ ನನಗೆ ಪರಮ ಸಂತೋಷವಾಗುತ್ತದೆ. ನಿಮ್ಮಿಂದ ಬೇರೆ ಯಾವುದೇ ಕಾಣಿಕೆ ನಾನು ಅಪೇಕ್ಷಿಸುವುದಿಲ್ಲ" ಎಂದು ತಿಳಿಸಿದರು. "ಚಾತುರ್ಮಾಸದಲ್ಲಿ ಗುರುಗಳ ಭೇಟಿಯಿಂದ ವಿಶೇಷ ಪುಣ್ಯ ಪ್ರಾಪ್ತಿಯಾಗುತ್ತದೆ ಹಾಗೂ ನಮಗೂ ತುಂಬಾ ಸಂತೋಷವಾಗುತ್ತದೆ. ಹಾಗಾಗಿ ಬಂದಿರುವಂತ ಎಲ್ಲಾ ಸ್ಥಾನಿಕ ಸಮಾಜದ ಭಕ್ತರಿಗೆ ನನ್ನ ಸಂಪೂರ್ಣ ಅನುಗ್ರಹವಿದೆ" ಎಂದು ಆಶೀರ್ವಚಿಸಿದರು. ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅನುಗ್ರಹವನ್ನು ಮನ ತುಂಬಿಕೊಂಡ ಸದಸ್ಯರು ಗುರುಗಳಿಂದ ಫಲ ಮಂತ್ರಾಕ್ಷತೆ, ಪ್ರಸಾದ ಭೋಜನ ಪಡೆದು ಮತ್ತೆ ಮಂಗಳೂರಿನತ್ತ ಪ್ರಯಾಣ ಬೆಳೆಸಿದರು. ಮತ್ತೆ ಬಸ್ಸಿನಲ್ಲಿ ಚಿತ್ರಗೀತೆ, ಅಂತ್ಯಾಕ್ಷರಿ, ಮಿಮಿಕ್ರಿಗಳು ಮೊಳಗ ತೊಡಗಿದವು. ಹೆದ್ದಾರಿಯಲ್ಲಿ ಕಾಫಿ, ಟೀ, ಬಿಸ್ಕುಟ್‌ರೊಟ್ಟಿ ಸವಿದ ಸದಸ್ಯರು ತಮ್ಮ ಪ್ರತಿಭಾ ಪ್ರದರ್ಶನ ನೀಡುತ್ತಾ ಮುಂದುವರಿದರು. ನಮ್ಮ ಶೃಂಗೇರಿ ಯಾತ್ರೆಯಲ್ಲಿ ಭಾಗವಹಿಸಿದ, ಸಹಕರಿಸಿದ ಎಲ್ಲರಿಗೂ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಧನ್ಯವಾದಗಳು ಹಾಗೂ ಹೃದಯಪೂರ್ವಕ ವಂದನೆಗಳು.

***ವರದಿ: ಶ್ರೀ ಪಿ. ಶ್ರೀಕಾಂತ್ ರಾವ್***

ಸ್ವಸ್ತಿ ಶ್ರೀ ಜಯನಾಮ ಸಂವತ್ಸರದ ಕನ್ಯಾ ಮಾಸ
ದಿನ ೨೯ ಸಲುವ ಅಶ್ವಯುಜ ಬಹುಳ ಚತುರ್ಥಿಯ
ರವಿವಾರ ತಾ.12-10-2014 ರಂದು

**ಪರೀಕ ಶ್ರೀ ಮಹಾಲಿಂಗೇಶ್ವರ ಶ್ರೀ ಮಹಾಗಣಪತಿ ದೇವರ ಸನ್ನಿಧಿಯಲ್ಲಿ**
**ಪರೀಕ ಡಾ। ಶ್ರೀ ಗೋಪಾಲಕೃಷ್ಣ ರಾವ್ ಮತ್ತು**
**ಶ್ರೀಮತಿ ಲೀಲಾವತಿಯವರ ಕುಟುಂಬಿಕರು**
ಲೋಕ ಕಲ್ಯಾಣಾರ್ಥವಾಗಿ ಮತ್ತು ಭಗವತ್ಭಕ್ತರ ಇಷ್ಟಾರ್ಥ ಸಿದ್ಧಿಗಾಗಿ
**ಬ್ರಹ್ಮಶ್ರೀ ವೇ।ಮೂರ್ತಿ ಷಡಾಂಗ ಬಿ.ಗುರುರಾಜ ತಂತ್ರಿಯವರ ನೇತೃತ್ವದಲ್ಲಿ**

## ಸಹಸ್ರಾಷ್ಟೋತ್ತರ ನಾಳಿಕೇರ ಮಹಾಗಣಯಾಗವನ್ನು

ಮಾಡುವುದೆಂದು ನಿಶ್ಚಯಿಸಿರುತ್ತಾರೆ.
ಆ ಪ್ರಯುಕ್ತ ತಾವು ಸಹಕುಟುಂಬ ಸಮೇತರಾಗಿ ಬಂದು,
ಈ ಮಹಾದೇವತಾ ಕಾರ್ಯಕ್ರಮದಲ್ಲಿ ಭಾಗಿಯಾಗಿ,
ಯಾಗದ ಪ್ರಸಾದವನ್ನು ಸ್ವೀಕರಿಸಿ,
ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ,

**ಡಾ। ಗೋಪಾಲಕೃಷ್ಣರಾಯರು ಮತ್ತು ಶ್ರೀಮತಿ ಲೀಲಾವತಿ**
**ಸಹೋದರರು, ಮಕ್ಕಳು ಮತ್ತು ಪರೀಕ ಕುಟುಂಬಿಕರು**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: ''ಸತ್ಸಂಗದವರಿಂದ ಭಜನೆ'' ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.11-10-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.13-10-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.28-10-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಲೇಖಕರಿಗೆ ಮನವಿ

ಶ್ರೀಶಾರದಾ ಪತ್ರಿಕೆಗೆ ಯಾವುದೇ ಲೇಖನ ಮತ್ತು ಫೋಟೋಗಳನ್ನು ಕಳುಹಿಸುವವರು **srisharadaudupi@yahoo.co.in** ಈ ಇ-ಮೇಲ್ ವಿಳಾಸಕ್ಕೆ ತಾವೇ ಮುದ್ರಿಸಿದ ಫೈಲ್‌ಗಳನ್ನು ಕಳುಹಿಸುವ ಮುಖಾಂತರವೂ ನಮಗೆ ತಲುಪಿಸಬಹುದು. ಇದರಿಂದ ಮುದ್ರಣದಲ್ಲಿ ಸ್ಪಷ್ಟತೆ ಹಾಗೂ ಸಮಯದ ಉಳಿತಾಯವಾಗುವುದು.

-ಸಂಪಾದಕರು, ಶ್ರೀಶಾರದಾ ಪತ್ರಿಕೆ

## ಋಷಿ ಪಂಚಮೀ ವ್ರತ

ಮುದರಂಗಡಿ ಮೈಕೋಡಿಯ ಶ್ರೀಮತಿ ಲೀಲಾ ಮತ್ತು ಶ್ರೀ ಶ್ರೀನಿವಾಸ ರಾವ್ ದಂಪತಿಗಳ ಋಷಿ ಪಂಚಮೀ ವ್ರತೋದ್ಯಾಪನೆಯ ಸತ್ಕಾರ್ಯವನ್ನು ದಿನಾಂಕ 31-08-2014ರಂದು ಮುದರಂಗಡಿಯ ಮೈಕೋಡಿ ಶಾಂತಿ ನಿಲಯದಲ್ಲಿ ತಮ್ಮ ಪುತ್ರರು, ಸೊಸೆಯಂದಿರು, ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

## ಸಿಂಹ ಮಾಸದ ವಿಶೇಷ ದಿನಗಳು

| | |
|---|---|
| 16-09-2014 | ಕನ್ಯಾ ಸಂಕ್ರಮಣ, |
| 19-09-2014 | ಸರ್ವೈಕಾದಶೀ |
| 21-09-2014 | ಪ್ರದೋಷಃ |
| 24-09-2014 | ಮಹಾಲಯ ಅಮವಾಸ್ಯಾ |
| 25-09-2014 | ನವರಾತ್ರಿ ಪ್ರಾರಂಭ |
| 27-09-2014 | ಹಸ್ತಾ ನಕ್ಷತ್ರಾರಂಭ |
| 28-09-2014 | ಲಲಿತ ಪಂಚಮಿ |
| 03-10-2014 | ಮಹಾನವಮಿ |
| 04-10-2014 | ವಿಜಯದಶಮಿ ಏಕಾದಶೀ |
| 06-10-2014 | ಪ್ರದೋಷಃ |
| 08-10-2014 | ಪೂರ್ಣಿಮಾ |
| 10-10-2014 | ಚಿತ್ರಾನಕ್ಷತ್ರಾರಂಭ |
| 11-10-2014 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-8.27ಕ್ಕೆ |
| 17-10-2014 | ತುಲಾ ಸಂಕ್ರಮಣ |

ಹಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-

## ಶಾರದಾಭುಜಂಗಪ್ರಯಾತಸ್ತೋತ್ರಮ್

ಸುವಕ್ಷೋಜಕುಂಭಾಂ ಸುಧಾಪೂರ್ಣಕುಂಭಾಂ
ಪ್ರಸಾದಾವಲಂಬಾಂ ಪ್ರಪುಣ್ಯಾವಲಂಬಾಮ್ ।
ಸದಾಸ್ಯೇಂದುಬಿಂಬಾಂ ಸದಾನೋಷ್ಠಬಿಂಬಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ ೧ ॥

ಕಟಾಕ್ಷೇ ದಯಾರ್ದ್ರಾಂ ಕರೇ ಜ್ಞಾನಮುದ್ರಾಂ
ಕಲಾಭಿರ್ವಿನಿದ್ರಾಂ ಕಲಾಪೈಃ ಸುಭದ್ರಾಮ್ ।
ಪುರಸ್ತ್ರೀಂ ವಿನಿದ್ರಾಂ ಪುರಸ್ತುಂಗಭದ್ರಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ ೨ ॥

ಲಲಾಮಾಂಕಫಾಲಾಂ ಲಸದ್ಗಾನಲೋಲಾಂ
ಸ್ವಭಕ್ತೈಕಪಾಲಾಂ ಯಶಃಶ್ರೀಕಪೋಲಾಮ್ ।
ಕರೇ ತ್ವಕ್ಷಮಾಲಾಂ ಕನತ್ಪ್ರತ್ನಲೋಲಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ ೩ ॥

ಸುಸೀಮಂತವೇಣಿಂ ದೃಶಾ ನಿರ್ಜಿತೈಣೀಂ
ರಮತ್ಕೀರವಾಣೀಂ ನಮದ್ವಜ್ರಪಾಣಿಮ್ ।
ಸುಧಾಮಂಥರಾಸ್ಯಾಂ ಮುದಾ ಚಿಂತ್ಯ ವೇಣೀಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ ೪ ॥

ಸುಶಾಂತಾಂ ಸುದೇಹಾಂ ದೃಗಂತೇ ಕಚಾಂತಾಂ
ಲಸತ್ಸಲ್ಲತಾಂಗೀಮನಂತಾಮಚಿಂತ್ಯಾಮ್ ।
ಸ್ಮೃತಾಂ ತಾಪಸೈಃ ಸರ್ಗಪೂರ್ವಸ್ಥಿತಾಂ ತಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ ೫ ॥

ಕುರಂಗೇ ತುರಂಗೇ ಮೃಗೇಂದ್ರೇ ಖಗೇಂದ್ರೇ
ಮರಾಲೇ ಮದೇಭೇ ಮಹೋಕ್ಷೇಽಧಿರೂಢಾಮ್ ।
ಮಹತ್ಯಾಂ ನವಮ್ಯಾಂ ಸದಾ ಸಾಮರೂಪಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ ೬ ॥

ಜ್ವಲತ್ಕಾಂತಿವಹ್ನಿಂ ಜಗನ್ಮೋಹನಾಂಗೀಂ
ಭಜೇನ್ಮಾನಸಾಂಭೋಜ ಸುಭ್ರಾಂತಭೃಂಗೀಮ್ ।
ನಿಜಸ್ತೋತ್ರ ಸಂಗೀತನೃತ್ಯ ಪ್ರಭಾಂಗೀಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ ೭ ॥

ಭವಾಂಭೋಜನೇತ್ರಾಬ್ಜ ಸಂಪೂಜ್ಯಮಾನಾಂ
ಲಸನ್ಮಂದಹಾಸ ಪ್ರಭಾವಕ್ತ್ರಚಿಹ್ನಾಮ್ ।
ಚಲಚ್ಚಂಚಲಾಚಾರು ತಾಟಂಕಕರ್ಣಾಂ
ಭಜೇ ಶಾರದಾಂಬಾಮಜಸ್ರಂ ಮದಂಬಾಮ್ ॥ ೮ ॥

## ಶುಭಜನನ

ಕಂಬದಕೋಣೆಯ ಶ್ರೀ ವಿಜೇತ ಹಾಗೂ ಶ್ರೀಮತಿ ಸೌಮ್ಯಾ ದಂಪತಿಗಳಿಗೆ ದಿನಾಂಕ 12-07-2014ರಂದು ಗಂಡು ಶಿಶುವಿನ ಜನನ.

## ಕಾರ್ಕಳದಲ್ಲಿ ವಾರ್ಷಿಕೋತ್ಸವ

"ಸಂಸ್ಕಾರದಿಂದ ಸಂಸಾರ ಮತ್ತು ಸಮಾಜ ಉಳಿಯುತ್ತದೆ, ಬೆಳೆಯುತ್ತದೆ. ಹೆತ್ತವರು ಮಕ್ಕಳ ಬೇಡಿಕೆಗಳನ್ನು ಕಣ್ಣುಮುಚ್ಚಿಕೊಂಡು ಈಡೇರಿಸುವುದು ಸೂಕ್ತವಲ್ಲ. ಇವರಿಗೆ ಅಗತ್ಯವಾದುದನ್ನು ಕೊಡುವುದರಲ್ಲಿ ತಪ್ಪಿಲ್ಲ. ಆದರೆ ವೈಭವದ ವಸ್ತುಗಳನ್ನು, ಜೀವನ ಎಂದರೆ ಏನೆಂದು ಅರಿಯುವ ಮುನ್ನ ನೀಡಿ ಅವರು ದಾರಿ ತಪ್ಪಲು ಹಿರಿಯರಾದ ನಾವೇ ಕಾರಣರಾಗುತ್ತಿದ್ದೇವೆ. ಮಕ್ಕಳಿಗೆ ಸ್ವಾತಂತ್ರ್ಯ ಕೊಡಬೇಕು ಆದರೆ ಸ್ವಚ್ಛಂದತೆಯನ್ನಲ್ಲ. ಅದರಿಂದಾಗಿ ಮಕ್ಕಳು ಕ್ಷಣಿಕ ಆಕರ್ಷಣೆಯಿಂದ ಪ್ರೀತಿಸಿ, ಮದುವೆಯಾಗಿ ವರ್ಷ ಕಳೆಯುವ ಮುನ್ನವೇ ವಿಚ್ಛೇದನ ಪಡೆಯುವಂತಹ ವಿದೇಶಿ ಸಂಸ್ಕೃತಿಗೆ ದಾಸರಾಗುತ್ತಿರುವುದು ನಾಚಿಕೇಡಿನ ವಿಚಾರ. ಆದ್ದರಿಂದ ನಮ ಭಾಷೆ, ನಮ್ಮ ಸಂಸ್ಕೃತಿಯನ್ನು ಮನೆ ಮನೆಗಳಲ್ಲಿ ಉಳಿಸಿಕೊಳ್ಳಬೇಕು. ಆ ಮೂಲಕ ಉತ್ತಮ ಸಮಾಜದ ಉತ್ತಮ ವ್ಯಕ್ತಿಗಳನ್ನು ರೂಪಿಸಬೇಕು' ಎಂದು ಮಂಗಳೂರಿನ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ನುಡಿದರು.

ಅವರು ಕಾರ್ಕಳದ ಶ್ರೀ ಶಂಕರ ಪ್ರತಿಷ್ಠಾನದ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು. ಇನ್ನೋರ್ವ ಮುಖ್ಯ ಅತಿಥಿ ಶ್ರೀಮತಿ ಶಶಿರೇಖಾ ಎಂ. ರಾವ್, ಬೈಲೂರು ಇವರು ಮಹಿಳೆಯರು ಸಮಾಜ ಸುಧಾರಣೆ, ಪರಿಸರ ಸ್ವಚ್ಛತೆ ರೂಢಿಸಿಕೊಳ್ಳುವ ಮೂಲಕ ಭಾವೀ ಭಾರತದ ಭವ್ಯ ಪ್ರಜೆಗಳನ್ನು ರೂಪಿಸಬೇಕೆಂದು ಕರೆ ಕೊಟ್ಟರು. ಶ್ರೀ ರಮೇಶ್ ರಾವ್ ಕರ್ವಾಲು ಹಾಗೂ ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಸಾವಿತ್ರಿ ಮನೋಹರ್ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು.

ಮುಂಜಾನೆ ಶ್ರೀ ಶಂಕರ ಭಗವತ್ಪಾದರ ಎದುರು ದೀಪ ಬೆಳಗಿಸಿದ ಶ್ರೀ ಎ.ರಾಮಮೋಹನ ರಾವ್‌ರವರು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಮಹಿಳಾ ವಿಭಾಗದ ಕಾರ್ಯದರ್ಶಿ ಶ್ರೀಮತಿ ಸೌಮ್ಯಾ ಬಿ. ರಾವ್ ಮತ್ತು ಮಲ್ಲಿಕಾ ಹೆಬ್ಬಾರ್‌ರ ಪ್ರಾರ್ಥನೆಯೊಂದಿಗೆ ಆರಂಭವಾದ ಸಭೆಯ ಸರ್ವರನ್ನು ಉಪಾಧ್ಯಕ್ಷ ಶ್ರೀ ಕೆ. ರತ್ನಾಕರ ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ನಕ್ರೆ ಶಿವರಾಯರು ವಾರ್ಷಿಕ ವರದಿ ವಾಚಿಸಿದರೆ ಕೋಶಾಧಿಕಾರಿ ಶ್ರೀ ಎ. ಅರವಿಂದ ರಾವ್ ಕಲ್ಯಾ ಲೆಕ್ಕಪತ್ರ ಮಂಡಿಸಿದರು. ನಂತರ ಶಿಕ್ಷಣ ರಂಗದಲ್ಲಿ ಅಧಿಕ ಅಂಕಗಳೊಂದಿಗೆ ಮಿಂಚಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಶ್ರೀ ಶಂಕರ ಸ್ತೋತ್ರ ಪಠಣದಲ್ಲಿ ಪ್ರಥಮ ಸ್ಥಾನ ಗಳಿಸಿದ ಕು. ಸಿಂಚನಾ ಶರ್ಮಳಿಗೆ ಬಹುಮಾನ ನೀಡಲಾಯಿತು.

ಪ್ರತಿಷ್ಠಾನದ ಪದ್ಧತಿಯಂತೆ ಹಿರಿಯರಾದ ಶ್ರೀ ನಂದಳಿಕೆ ಭುಜಂಗರಾವ್, ಕರ್ವಾಲು ಶ್ರೀ ಸೋಮಶೇಖರ ರಾವ್ ಹಾಗೂ ಶ್ರೀಮತಿ ಪ್ರೇಮಾ ರಾವ್ ಕುಕ್ಕುಂದೂರು ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶ್ರೀ ನಕ್ರೆ ಶಿವರಾವ್, ಶ್ರೀ ಕರ್ವಾಲು ಸತೀಶ್ ರಾವ್ ಹಾಗೂ ಶ್ರೀಮತಿ ವತ್ಸಲಾ ಶ್ಯಾನುಭಾಗರು ಸನ್ಮಾನ ಪತ್ರಗಳನ್ನು ವಾಚಿಸಿದರು. ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶ್ರೀ ವಿ.ಕೆ. ರಾವ್ ನಂದಳಿಕೆ ಮತ್ತು ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಅಂಚೆ ಉದ್ಯೋಗಿ ಪ್ರಶಸ್ತಿ ಪುರಸ್ಕೃತ ಶ್ರೀ ಕಳಸ ಕೇಶವ ರಾವ್ ಕಾರ್ಕಳ ಅವರನ್ನು ಗೌರವಪೂರ್ವಕ ಸನ್ಮಾನಿಸಲಾಯಿತು.

ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಮುರಳೀಧರ ಶರ್ಮ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮದ ಯಶಸ್ಸಿನ ಬಗೆಗೆ ಮಾತನಾಡಿ ತಮ್ಮ ಮನದಾಳದ ಕೃತಜ್ಞತೆ ಸಲ್ಲಿಸಿದರು. ಶ್ರೀಮತಿ ಶೈಲಜಾ ರಮೇಶ್ ರಾವ್ ನಿರ್ವಹಿಸಿದ ಕಾರ್ಯಕ್ರಮಕ್ಕೆ ಶ್ರೀ ಸತೀಶ್ ರಾವ್ ಕರ್ವಾಲು ಧನ್ಯವಾದವಿತ್ತರು. ಸಭಾ ಕಾರ್ಯಕ್ರಮದ ನಂತರ ಸದಸ್ಯರಿಂದ ನಡೆದ ಕರಗ ನೃತ್ಯ, ಜಾನಪದ ನೃತ್ಯ ಹಾಗೂ ಶ್ರೀಮತಿ ಸಾವಿತ್ರಿ ಮನೋಹರ್ ರಚಿಸಿ ನಿರ್ದೇಶಿಸಿದ ರೂಪಕ ಬಂಧ ವಿಮುಕ್ತಿ ತುಂಬಿದ ಸಭೆಯ ಮೆಚ್ಚುಗೆ ಗಳಿಸಿತು. ಪ್ರತಿಭಾವಂತ ಕಲಾವಿದರನ್ನು ಗೌರವಿಸಲಾಯಿತು.

# ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



**ಪ್ರಶ್ನೆ : ನಮ್ಮ ಸ್ವಭಾವವು ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆಯೇ?**

**ಉತ್ತರ :** ''ಸ್ವಭಾವ''ವೆಂದರೇನು? ನಮ್ಮ ದೇಹದೊಳಗಿನ ಹಾಗೂ ಹೊರಗಿನ ಪರಿಸರದ ಆಗುಹೋಗುಗಳಿಗೆ, ಏರುಪೇರುಗಳಿಗೆ, ಸುಖದುಃಖಗಳಿಗೆ, ಬದಲಾವಣೆಗಳಿಗೆ, ಅಪಾಯಗಳಿಗೆ ಪ್ರತಿಕ್ರಿಯೆಯನ್ನು ಜೀವಿಯೊಬ್ಬನು ವ್ಯಕ್ತಪಡಿಸುವ ರೀತಿಯನ್ನು ಒಬ್ಬನ ಸ್ವಭಾವವೆನ್ನಬಹುದು. ಒಂದೇ ನಮೂನೆಯ ಸಂದರ್ಭದಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ವರ್ತಿಸುವುದನ್ನು ನಾವು ಕಾಣುತ್ತೇವೆ. ಈ ವ್ಯತ್ಯಾಸವು ಅವನ ಸ್ವಭಾವಕ್ಕನುಗುಣ ವಾಗಿರುತ್ತದೆಂಬುದು ವಿದಿತವಲ್ಲವೇ? ಒಬ್ಬನ ಸ್ವಭಾವವು ಅವನ ಅನುವಂಶಿಕ ಗುಣಗಳಿಂದಾಗಿ, ಜೀವನದಲ್ಲಿ ತಾನು ಕಲಿತ ಅನುಭವಗಳಿಂದಾಗಿ, ತಾನು ಹೊಂದಿರುವ ಶಕ್ತಿ, ವಿದ್ಯೆ, ಹುದ್ದೆ ಹಾಗೂ ಆತ್ಮವಿಶ್ವಾಸದಿಂದಾಗಿ, ಸಾಮಾಜಿಕ ಕಟ್ಟುಪಾಡುಗಳಿಂದಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಈ ನಮ್ಮ ಸ್ವಭಾವವು ಕಾಯಿಲೆಯೊಂದಕ್ಕೆ ಹೇತುವಾಗಬಲ್ಲುದೆಂಬುದು ಕುತೂಹಲಕಾರಿಯಾಗಿದೆಯಲ್ಲವೇ?

ದಾರಿಯಲ್ಲಿ ಹೋಗುವಾಗ ನಾಯಿಯೊಂದು ಅಡ್ಡಬಂದರೆ ದೂರದಲ್ಲೆ ಅದನ್ನು ಕಂಡು ನಿಂತು ಬಿಡುವುದು ಅಂಜಿಕೆ ಸ್ವಭಾವ. ನಾಯಿಯನ್ನು ಬೆದರಿಸಿ ಮುಂದೆ ಹೋಗುವುದು ಧೈರ್ಯದ ಸ್ವಭಾವ. ನಾಯಿಯಿರುವುದನ್ನು ಗಮನಿಸಿರದೆ ಮುಂದೆ ಹೋಗುತ್ತಾ ಇರುವುದು ನಿರುಮ್ಮಳ ಸ್ವಭಾವ. ಯಾರೋ ತನಗಾಗದವರು ನಾಯಿಯನ್ನು ತಂದು ಅಡ್ಡಬಿಟ್ಟರೆಂದು ಎಣಿಸುವುದು ಸಂಶಯ ಸ್ವಭಾವ. ನಾಯಿ ಅಡ್ಡಬಂದಿದೆಯಲ್ಲ ಇನ್ನು ಮುಂದೆ ಹೇಗೆ ಹೋಗಲಿ ಎಂದು ಕೊರಗುವುದು ಅಳು ಬುರುಕರ ಸ್ವಭಾವ. ಹೀಗೆ ಈ ''ಸ್ವಭಾವ''ವನ್ನು ಉದಾಹರಣೆಗಳೊಂದಿಗೆ ವಿವರಿಸಲು ಮಾತ್ರ ಸಾಧ್ಯವಿದೆ. ಹೆದರಿಕೆ ಸ್ವಭಾವದವರು, ಧೈರ್ಯದ ಸ್ವಭಾವದವರು, ದುಡುಕು ಸ್ವಭಾವದವರು, ಕೋಪಿಷ್ಟರು, ಅಳುಬುರುಕರು, ಸಮಾಧಾನಿಗಳು, ಹಾಸ್ಯ ಪ್ರವೃತ್ತಿಯವರು, ಸಂಶಯ ಸ್ವಭಾವದವರು, ದುಷ್ಟಸ್ವಭಾವದವರು ಹೀಗೆ ನಾನಾ ಸ್ವಭಾವದ ಜನರನ್ನು ನಾವು ಸಮಾಜದಲ್ಲಿ ಕಾಣುತ್ತೇವೆ. ಎಲ್ಲರಲ್ಲೂ ಈ ಗುಣಗಳು ಸ್ವಲ್ಪ ಸ್ವಲ್ಪ ಇರುವಂತಾದ್ದೇ, ಅದರೆ ಒಂದು ಗುಣ ಮಾತ್ರ ಪ್ರಾಮುಖ್ಯವಾಗಿ ಕಂಡು ಅದು ಅವನ ಸ್ವಭಾವ ಎಂದು ಗುರುತಿಸುವಂತಿರುತ್ತದೆ. ಅದು ಅತಿಯಾಗಿದ್ದರೆ ಮಾನಸಿಕ ಖಾಯಿಲೆಯಾಗುತ್ತದೆ. ನಮ್ಮ ಸ್ವಭಾವ ಯಾವ ರೀತಿ ಇದೆ ಹಾಗೂ ಅದರ ಸಾಧಕಭಾಧಕಗಳೇನು ಎಂಬ ಸ್ವಯಂ ಪರಾಮರ್ಶೆ ಮಾಡುತ್ತಿರುವುದು ಹಾಗೂ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳುವುದು ನಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ಪೂರಕವಾದ ವಿಚಾರವಾಗಿದೆ.

ನಮ್ಮ ಸ್ವಭಾವಕ್ಕೆ ಅತ್ಯಂತ ನಿಕಟ ಸಂಪರ್ಕ ಹೊಂದಿರುವ ಖಾಯಿಲೆಯೆಂದರೆ ಮನೋದೈಹಿಕ ಖಾಯಿಲೆಗಳು(psychosomatic disorders). ಈ ಖಾಯಿಲೆಗಳಲ್ಲಿ ರೋಗಿಯು ದೇಹದಲ್ಲಿ ನಿಜವಾಗಿಯೂ ಯಾವುದೇ ಖಾಯಿಲೆಯಿರದೆ ತನ್ನ ದೇಹದಲ್ಲಿ ಸ್ವಾಭಾವಿಕವಾಗಿ ಆಗುವ ಬದಲಾವಣೆಗಳನ್ನು ಅಥವಾ ಸಣ್ಣಪುಟ್ಟ ನೋವುಗಳನ್ನು ಯಾವುದೋ ದೊಡ್ಡ ಖಾಯಿಲೆಯೊಂದರ ಚಿಹ್ನೆಯೆಂದು ಭಾವಿಸಿ ಅನಗತ್ಯವಾಗಿ ಪದೇಪದೇ ತಪಾಸಣೆಗೊಳಗಾಗುವುದು, ಔಷಧ ಸೇವಿಸುವುದು, ಆಸ್ಪತ್ರೆಗೆ ದಾಖಲಾಗುವುದು ಇತ್ಯಾದಿ ಮಾಡುತ್ತಿರುತ್ತಾನೆ. ಈ ಮನೋದೈಹಿಕ ಖಾಯಿಲೆಗಳು ಅಂಜಿಕೆ ಸ್ವಭಾವದವರಲ್ಲಿ ಹಾಗೂ ಸಂಶಯ ಸ್ವಭಾವದವರಲ್ಲಿ ಹಾಗೂ ಅಳುಬುರುಕ ಸ್ವಭಾವದವರಲ್ಲಿ ಜಾಸ್ತಿ.

ಯಾವುದೇ ಖಾಯಿಲೆ ಇಲ್ಲದೇ ಖಾಯಿಲೆ ಇದ್ದಂತೆ ನಟನೆ ಮಾಡುವುದೂ ಒಂದು ಖಾಯಿಲೆ! ಅಂಜಿಕೆ ಸ್ವಭಾವದವರು ಕೆಲವೊಮ್ಮೆ ತಾವು ಭಯಪಟ್ಟಿರುವ ಸನ್ನಿವೇಶದಿಂದ ಪಾರಾಗಲು ಖಾಯಿಲೆ ಬಿದ್ದವರಂತೆ ನಟಿಸುತ್ತಾರೆ. ಕಣ್ಣು ಕಾಣದವರಂತೆ, ಪೆದ್ದರಂತೆ, ಮೂರ್ಛೆಹೋದಂತೆ, ಕೈಕಾಲುಗಳಲ್ಲಿ ಬಲವಿಲ್ಲದಂತೆ ನಟನೆ ಮಾಡಿ ವೈದ್ಯರನ್ನು ಬೇಸ್ತುಬೀಳಿಸಬಲ್ಲ ಕೆಲವು ರೋಗಿಗಳ ನಟನಾ ಕೌಶಲ್ಯ ಪ್ರಶಂಸಾರ್ಹವಾದರೂ ಜೀವನದ ಪ್ರತಿಯೊಂದು ಆತಂಕದ ಕ್ಷಣಗಳಲ್ಲೂ ಹೀಗೆ ನಟಿಸಿದರೆ ಅದು ಖಾಯಿಲೆಯಲ್ಲದೇ ಮತ್ತೇನು?

ಅಳುಬುರುಕ ಹಾಗೂ ದು:ಖ ದುಗುಡದ ಸ್ವಭಾವದವರು ಹಾಗೂ ಅಂಜಿಕೆ ಸ್ವಭಾವದವರು ಆತ್ಮಹತ್ಯೆ ಹಾಗೂ ಸ್ವಯಂ ದೇಹದಂಡನೆ ಮಾಡಿಕೊಳ್ಳುವುದು ಜಾಸ್ತಿ. ಹಾಗೆಯೇ ಅಫಘಾತಗಳು ಧೈರ್ಯಸಾಹಸ ಹಾಗೂ ಅವಸರದ ಸ್ವಭಾವದರಲ್ಲಿ ಜಾಸ್ತಿ.

ಮದ್ಯಪಾನ ಧೂಮ್ರಪಾನ, ಮಾದಕ ದ್ರವ್ಯಗಳ ಚಟವು ಈ ಮೇಲಿನ ಸ್ವಭಾವದವರಿಗೆ ಜಾಸ್ತಿ. ಹಾಗೆಯೇ ಪರೀಕ್ಷಿಸಿ ನೋಡುವ ಹುಮ್ಮಸ್ಸಿನ ಧೈರ್ಯದ ಸ್ವಭಾವದವರೂ ಈ ಚಟಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚು.

ನಮ್ಮ ಸ್ವಭಾವು ನೇರವಾಗಿ ನಮ್ಮ ದೇಹದ ಮೇಲೆ ಪ್ರಭಾವ ಬೀರಿತರುವ ದೈಹಿಕ ಖಾಯಿಲೆಗಳೂ ಅನೇಕವಿವೆ. ಜಠರ ಹಾಗೂ ಕರುಳಿನ ಹುಣ್ಣುಗಳು (ulcer), ಇರಿಟೇಬಲ್‌ಬವೆಲ್ಸಿಂಡ್ರೋಮ್(IBS), ಅಲ್ಸರೇಟಿವ್ ಕೊಲೈಟಿಸ್, ಅಟೋ ಇಮ್ಯೂನ್ ಖಾಯಿಲೆಗಳು, ಸಿಹಿಮೂತ್ರರೋಗ, ಅಧಿಕ ರಕ್ತದೊತ್ತಡ, ಹೃದ್ರೋಗ, ಷಂಡತನ ಈ ಎಲ್ಲಾ ಖಾಯಿಲೆಗಳಿಗೆ ಅಂಜಿಕೆ, ಕಳವಳ ದುಗುಡ, ಅವಸರ ಹಾಗೂ ದುಃಖಪಡುವ ಸ್ವಭಾವವೂ ಒಂದು ಮುಖ್ಯ ಕಾರಣವಾಗಿದೆ. ಅತಿಯಾಗಿ ದು:ಖ ಪಡುವವರಲ್ಲಿ ಹಾಗೂ ನಿರಾಶಾ ಪ್ರವೃತ್ತಿಯವರಲ್ಲಿ ಕ್ಯಾನ್ಸರ್ ಕಾಯಿಲೆ ಹೆಚ್ಚಿಗೆ ಇರುವುದನ್ನು ಗಮನಿಸಲಾಗಿದೆ.

ರೋಗಿಯನ್ನು ಕೇವಲ ಕೆಟ್ಟು ಹೋದ ಅಂಗಗಳಿರುವ ಮನುಷ್ಯನೆಂದು ಗುರುತಿಸದೇ ಆ ಖಾಯಿಲೆಯಿಂದ ಅವನ ಮನಸ್ಸಿಗೂ ಆಗಿರುವ ಆಘಾತವನ್ನೂ ಗುರುತಿಸಿ ಸಂತೈಸುವುದೂ ಚಿಕಿತ್ಸೆಯ ಒಂದು ಭಾಗವಾಗಿದೆ. ಹಾಗೆಯೇ ''ಛಲವಿಲ್ಲದಿದ್ದರೆ ಬಲವಿದ್ದರೂ ಪ್ರಯೋಜನವಿಲ್ಲ'' ಎಂಬ ಮಾತಿದೆ. ಯಾವುದೇ ಖಾಯಿಲೆ ಬರಲಿ ಗುಣವಾಗಬೇಕಾದರೆ ಔಷಧಿಯೊಂದಿಗೆ ತಾನು ಗುಣವಾಗಲೇಬೇಕು, ಗುಣವಾಗಿಯೇ ತೀರುತ್ತೇನೆ ಎಂಬ ಛಲ ಹಾಗೂ ಆತ್ಮವಿಶ್ವಾಸ ರೋಗಿಯ ಖಾಯಿಲೆಯನ್ನು ವಾಸಿಮಾಡುವಲ್ಲಿ ಹಾಗೂ ಅವನು ಅನುಭವಿಸುವ ನೋವನ್ನು ಕಡಿಮೆಮಾಡುತ್ತದೆನ್ನುವುದರಲ್ಲಿ ಎರಡು ಮಾತಿಲ್ಲ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

## ನಿಧನ

### ಕೃಷ್ಣಯ್ಯ ಹೆಬ್ಬಾರ್ ಕುಚ್ಚೂರು

ಕಬ್ಬಿನಾಲೆ ಕುಚ್ಚೂರಿನ ಶ್ರೀ ಕೃಷ್ಣಯ್ಯ ಹೆಬ್ಬಾರ್‌ರವರು ತಾ 22-07-2014ರಂದು ಉಡುಪಿಯಲ್ಲಿ ನಿಧನ ಹೊಂದಿದರು. ಮೃತರು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಜತೆಕಾರ್ಯದರ್ಶಿಯವರಾದ ಶ್ರೀ ಕೆ.ಮಂಜುನಾಥ ಹೆಬ್ಬಾರ್ ಹಾಗೂ 4 ಗಂಡು ಹಾಗೂ 8 ಹೆಣ್ಣು ಮಕ್ಕಳ ಸಹಿತ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ಪಿ.ಯು.ಸಿ.ಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ತೇರ್ಗಡೆ




| | | |
|---|---|---|
| ಹೆಸರು | : | **ಪೂಜಿತಾ ಎಸ್ ಎ** |
| ತಂದೆ | : | ನಾಗೇಶ್ ಶ್ಯಾನುಬೋಗ್ |
| ತಾಯಿ | : | ಸುಧಾ ಮಾಲಿನಿ |
| ವಿಳಾಸ | : | ಶ್ರೀ ದುರ್ಗಾ ಪ್ರಸನ್ನ ಅರೆಹೊಳೆ ನಾವುಂದ |
| ಕಾಲೇಜು | : | ವಿವೇಕ ಪಿ.ಯು ಕಾಲೇಜು ಕೋಟ |
| ಅಂಕ | : | 547 (ವಿಜ್ಞಾನ) |
| ಶೇಕಡಾ | : | 91% |

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಭಾಗ್ಯಲಕ್ಷ್ಮೀ ಮತ್ತು ಕುಬೆವೂರು ಶ್ರೀನಿವಾಸ ರಾವ್ ಇವರ ಪುತ್ರಿ **ಪ್ರಣೀತಾ** ಹಾಗೂ ಶ್ರೀಮತಿ ಜಯಶ್ರೀ ಮತ್ತು ಸಾಂತೂರು ಚಂದ್ರಕಾಂತ ರಾವ್ ನಾಸಿಕ್ ಇವರ ಪುತ್ರ ರೋಹನ್ ಕುಮಾರ್ ಇವರ ವಿವಾಹವು 18-08-2014ರಂದು ಪುನರೂರು ಶ್ರೀ ವಿಶ್ವನಾಥ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

Krishna Rao
Ph : 2520652
Mob. : 9902029048
KISHAN
Studio & Video






Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

Buying and selling shares
as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com

ಪ್ರೊ : ಸುಧಾಕರ್ ರಾವ್ ಬೆಳ್ಳೆ



ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

# ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿಯವರಿಂದ
## –ಶರನ್ನವರಾತ್ರಿ ಸಂದೇಶ–

॥ ನಮೋ ಗುರುಭ್ಯಃ ॥

॥ ಸಾನಂದಾಂ ಸುಪ್ರಸನ್ನಾಂ ತ್ರಿಭುವನಜನನೀಂ ಚೇತನಾ ಚಿಂತಯಾಮಿ ॥

ಜಗತ್ತಿನಲ್ಲಿ ಪ್ರತಿಯೊಬ್ಬನ ಗೌರವಕ್ಕೆ- ಪೂಜೆಗೆ ಪಾತ್ರಳಾದವಳು ತಾಯಿ. ವಿಶೇಷವಾಗಿ ದುಃಖಾವಸ್ಥೆಯಲ್ಲಿ "ಅಮ್ಮಾ" ಎಂದು ಕರೆಯದವರಿಲ್ಲ. ಅಷ್ಟರಿಂದಲೇ ನೆಮ್ಮದಿ. ಆದ್ದರಿಂದ ದೇವೋಪಾಸನೆಯಲ್ಲಿ ಮಾತೃರೂಪಿಣಿಯಾದ ಶಕ್ತಿಗೆ ಉನ್ನತ ಸ್ಥಾನ. ವಾಣೀ-ರಮಾ-ಗೌರೀ- ದುರ್ಗೆ- ಲಲಿತೆ ಎಂದು ಬಗೆಯಲ್ಲಿ ಭಕ್ತರು ಕಂಡು ಸ್ತುತಿಸಿದ್ದಾರೆ. ಮನುಷ್ಯರ ಶಕ್ತಿಗೆ ಮೀರಿದ ದುರಂತ ದುಃಖಗಳನ್ನು ಪರಿಹರಿಸಬಲ್ಲ ಜಗನ್ಮಾತೆ ಎಂದು ನಂಬಿದ್ದಾರೆ. "ಸಂಸಾರ ಪಂಕ ನಿರ್ಮಗ್ನ ಸಮುದ್ಧರಣ ಪಂಡಿತಾ" ಸಂಸಾರವೆಂಬ ಕೆಸರಿನಲ್ಲಿ ಸಿಲುಕಿ ಒದ್ದಾಡುವ ಜೀವವನ್ನು ಎತ್ತಿ ಪಾರು ಮಾಡುವವಳು ಎಂಬ ವರ್ಣನೆ ಲಲಿತಾ ಸಹಸ್ರನಾಮದಲ್ಲಿದೆ. ಆಕೆ ಆದಿಶಕ್ತಿ, ತ್ರಿಮೂರ್ತಿಗಳನ್ನು ಉಂಟುಮಾಡಿ, ಜಗತ್ತಿನ ಸೃಷ್ಟಿ-ಸ್ಥಿತಿ- ಲಯಗಳ ಹೊಣೆ ನೀಡಿದವಳು. "ಸೃಷ್ಟಿ ಸ್ಥಿತಿ ವಿನಾಶಾನಾಂ ಶಕ್ತಿಭೂತೇ ಸನಾತನಿ".

ಆಚಾರ್ಯ ಶ್ರೀ ಶಂಕರ ಭಗವತ್ಪಾದ ವಿರಚಿತ ಸೌಂದರ್ಯ ಲಹರಿಯ ಆದ್ಯ ಶ್ಲೋಕ ಹೀಗೆನ್ನುತ್ತದೆ "ಶಿವಃ ಶಕ್ತ್ಯಾಯುಕ್ತೋಭವತಿ ಯದಿಭವತಿ ಶಕ್ತಃ ಪ್ರಭವಿತುಂ ನಚೇ ದೇವಂ ದೇವೋ ನಖಲು ಕುಶಲಃ ಸ್ಪಂದಿತುಮಪಿ" – ಅಂದರೆ ಶಕ್ತಿಯಿಂದ ಕೂಡಿದಾಗ ಮಾತ್ರ ಶಿವನು ಏನನ್ನಾದರೂ ಮಾಡಬಲ್ಲ. ಇಲ್ಲವಾದರೆ ಅಲುಗಲೂ ಅಸಮರ್ಥ. ಹಾಗಾಗಿ ಹರಿಹರಬ್ರಹ್ಮರು ಶ್ರೀ ದೇವಿಯನ್ನು ಆರಾಧಿಸುತ್ತಾರೆ. ಅವಳ ಶಕ್ತಿಯಿಂದ ಇವರು ವರದಾಯಕರಾಗುತ್ತಾರೆ ಎನ್ನುತ್ತದೆ "ಮಾನಸೋಲ್ಲಾಸ" ಎಂಬ ಕೃತಿ. ನಿತ್ಯ ಅವ್ಯಕ್ತ ಸ್ವರೂಪದ ದೇವಿ ದೇವತೆಗಳ ಕಾರ್ಯಸಿದ್ಧಿಗಾಗಿ ಆಗಾಗ ಆವಿರ್ಭಾವ ಹೊಂದುತ್ತಾಳೆ. ಮಾತ್ರವಲ್ಲ ಭಕ್ತರ ಧ್ಯಾನ- ಪೂಜೆಗಳಿಗೆ ನಿಮಿತ್ತವಾಗಲೆಂದು ಸ್ವಮಾಯೆಯಿಂದ ವಿವಿಧ ರೂಪಗಳಲ್ಲಿ ಪ್ರತ್ಯಕ್ಷಳಾಗುತ್ತಾಳೆ. ಅಂತಹ ವಿಭೂತಿ ಸ್ವರೂಪಗಳಲ್ಲಿ ಶಿವಶಕ್ತ್ಯಾತ್ಮಕವಾದ ಯಂತ್ರ ರೂಪದ ಶ್ರೀ ಚಕ್ರವು ಉಪಾಸನಾ ಪದ್ಧತಿಗಳಲ್ಲಿ ಪರಮ ಪಾವನವಾದ ಸ್ಥಾನವನ್ನು ಪಡೆದಿದೆ. ಅದರ ಅಧಿದೇವತೆಯನ್ನು ಶ್ರೀ ವಿದ್ಯಾ – ಲಲಿತಾ –ರಾಜರಾಜೇಶ್ವರೀ– ತ್ರಿಪುರಸುಂದರೀ ಇತ್ಯಾದಿಯಾಗಿ ಕರೆಯುತ್ತಾರೆ. ಮಂತ್ರದೀಕ್ಷಾಸಂಪನ್ನರಾಗಿ ನಿತ್ಯವೂ ಶ್ರೀಚಕ್ರಪೂಜಾನುಷ್ಠಾನ ಮಾಡುವ ಸಂಪ್ರದಾಯ ಪ್ರಾಚೀನ ಕಾಲದಿಂದ ನಡೆದು ಬಂದಿದೆ, ಲಲಿತಾ ಸಹಸ್ರನಾಮ– ತ್ರಿಶತೀ– ಸೌಂದರ್ಯಲಹರೀ ಇವುಗಳು ಸರ್ವಜನ ಪರಿಚಿತವೂ ಪ್ರಸಿದ್ಧವೂ ಆಗಿದೆ. ಅನೇಕ ಭಕ್ತರು ಶ್ರೀ ವಿದ್ಯೆಯ ಮಂತ್ರದ ಷೋಡಶ ಬೀಜಾಕ್ಷರಯುಕ್ತವಾದ ಶ್ಲೋಕಗಳನ್ನು ರಚಿಸಿ ಶ್ರೇಯೋಭಾಗಿಗಳಾಗಿದ್ದಾರೆ. ದೇವೀ ಭಕ್ತಿಯಲ್ಲಿ ಮಗ್ನಚಿತ್ತರಾದ ಅವರಿಗೆ ಸ್ವರಚನೆಗಳಲ್ಲಿ ತಮ್ಮ ಹೆಸರನ್ನು ತಿಳಿಸುವ ಅಗತ್ಯವೂ ಕಂಡು ಬರಲಿಲ್ಲ. ಒಬ್ಬ ಭಕ್ತ ಕವಿ "ತ್ವಮೇಕೈವಕರ್ತೀ ತ್ವಮೇಕೈವ ಭೋಕ್ತ್ರೀ ನಮೇ ಪುಣ್ಯ ಪಾಪೇ ನಮೇ ಬಂಧ ಮೋಕ್ಷಾ" ಎಂದಿದ್ದಾನೆ. ಭಕ್ತರಿಂದ ಸ್ತುತಿ ಮಾಡಿಸುವುದೂ ಅವಳೇ. ಭಕ್ತರು ಸ್ತೋತ್ರ ಮಾಡುತ್ತಾ ದೇವಿಯೊಡನೆ ಕ್ಷಣ ಕಾಲ ಅಭೇದಭಾವವನ್ನು ಅನುಭವಿಸಿದರೂ ಸಾಕು. ಅದೇ ಅವಳ ಪೂರ್ಣಾನುಗ್ರಹ ಎಂಬ ಸಮರ್ಪಣಾಭಾವ ಅವರದು.

ಹಾಗಿದ್ದರೆ ಎಲ್ಲರೂ ಸ್ತುತಿಪಾಠ ಮಾಡಿ ಶ್ರೀ ಲಲಿತೆಯ ಅನುಗ್ರಹ ಪಡೆಯಬಹುದಲ್ಲವೇ? ಹೌದು ಆದರೆ ಕಲ್ಪಿಸಿದಷ್ಟು ಅದು ಸುಲಭವಲ್ಲ. ದೇವಿಯ ಮಹಿಮೆಯನ್ನು ಸ್ಮರಿಸಿ , ನಮಿಸಿ, ಸ್ತುತಿಸಲು ಆಕೃತ ಪುಣ್ಯರಿಗೆ ಅಂದರೆ ಪುಣ್ಯಾತ್ಮರಲ್ಲದ ವರಿಗೆ ಸಾಧ್ಯವಾಗದು. ಕೇವಲ ಕೆಲವರಷ್ಟೇ ಈ ಭಾಗ್ಯವನ್ನು ಪಡೆದಾರು. "ಭಜಂತಿ ತ್ವಾಂ ಧನ್ಯಾಃಕತಿಚನ ಚಿದಾನಂದ ಲಹರೀಂ" ಎಂದಿದ್ದಾರೆ, ಶ್ರೀ ಶಂಕರರು (ಜ್ಞಾನ- ಆನಂದಗಳ ಲಹರಿಯಾದ ಜಗಜ್ಜನನಿಯನ್ನು ಧನ್ಯರು ಮಾತ್ರ ಭಜಿಸುವರು).

ಆದುದರಿಂದ, ಈ ನಾಡಹಬ್ಬ ನವರಾತ್ರಿಯನ್ನು ಸಂಭ್ರಮದಿಂದ ಆಚರಿಸಿ, ಶ್ರೀ ಶಾರದೆಯ – ದುರ್ಗೆಯ – ಶ್ರೀ ರಾಜ ರಾಜೇಶ್ವರಿಯ ಕೃಪೆಗೆ ನಾವೆಲ್ಲರೂ ಪಾತ್ರರಾಗಿ ಧನ್ಯರಾಗೋಣ.

॥ಸಮಸ್ತ ಸನ್ಮಂಗಳಾನಿ ಭವಂತು॥

ಸಂದೇಶ ಸಂಗ್ರಹಕರು : ಜಿ.ಕೆ.ಕೋಲ್ಪೆ, ಉಡುಪಿ.

# ಪುತ್ತೂರು ಮಠಂತಬೆಟ್ಟು ನವರಾತ್ರಿ ಉತ್ಸವ

ಪುತ್ತೂರು ತಾಲೂಕು ಕೋಡಿಂಬಾಡಿಯ ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ದಿನಾಂಕ 25-09-2014ರಿಂದ ದಿನಾಂಕ 03-10-2014ರವರೆಗೆ ನವರಾತ್ರಿ ಉತ್ಸವವು ವಿವಿಧ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನೆರವೇರಲಿದೆ. ಅಲ್ಲದೆ ದಿನಾಂಕ 28-09-2014ರಂದು ಶ್ರೀ ಚಂಡಿಕಾ ಯಾಗವು ಸಂಪನ್ನಗೊಳ್ಳಲಿದೆ. ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿಯ ತೀರ್ಥ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾಗಬೇಕೆಂದು ಶ್ರೀ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಶ್ರೀ ಟಿ ಅಣ್ಣಪ್ಪಯ್ಯ ತೆಂಕಿಲ ಹಾಗೂ ಕಾರ್ಯದರ್ಶಿ ಶ್ರೀ ನಾಗೇಶ್ ಶರ್ಮ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್ , ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

## 2013-14ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ,

ನಮ್ಮ ಸಂಘದ 2013–2014ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.21-09-2014ನೇ ರವಿವಾರ ಪೂರ್ವಾಹ್ನ ಘಂಟೆ 11-00ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡವಳಿಕೆಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಆಡಳಿತ ಮಂಡಳಿಯ ನಿರ್ಣಯದಂತೆ**

**ಪಟ್ಟಾಭಿರಾಮ ಎನ್.ಎಸ್**
ಕಾರ್ಯದರ್ಶಿ

**ಎಂ ಸದಾನಂದ ರಾವ್**
ಅಧ್ಯಕ್ಷರು

**ವಿಷಯ ಸೂಚಿ**

1. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
2. ತಾ: 22-09-2013ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
3. 2013–2014ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
4. 2013–2014ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ.
5. 2013–2014ನೇ ಸಾಲಿನ ಅಂದಾಜು ಆಯ–ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
6. 2014–2015ನೇ ಸಾಲಿನ ಅಂದಾಜು ಆಯ–ವ್ಯಯ ಪಟ್ಟಿಯ ಅಂಗೀಕಾರ.
7. 2013–2014ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
8. 2014–2015ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
9. ಸಂಘದ ಮೂಲ ಉಪನಿಬಂಧನೆಗಳಿಗೆ ಸೂಚಿಸಲಾದ ತಿದ್ದುಪಡಿ ಬಗ್ಗೆ.
10. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.

**ವಿ.ಸೂ. :** 1. ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.

2. ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶ ಹಣವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.

**ಸದಸ್ಯರಿಗೆ ಮಧ್ಯಾಹ್ನ ಭೋಜನದ ವ್ಯವಸ್ಥೆ ಇರುತ್ತದೆ.**

# ಲಯನ್ಸ್ ಪ್ರಶಸ್ತಿ ಪ್ರದಾನ ಸಮಾರಂಭ



ಲಯನ್ಸ್ ಜಿಲ್ಲೆ 317ರ ಜಿಲ್ಲಾ ಸಮಾರಂಭವು ಮಂಗಳೂರು ಕೊಡಿಯಾಲ್‌ಬೈಲಿನಲ್ಲಿ ತಾ.29-6-2014ರಂದು ನಡೆದು ಮಂಗಳೂರಿನ ಶ್ರೀ ಹರ್ಷಕುಮಾರ್ ಕೇದಿಗೆ ಇವರು ಜಿಲ್ಲಾ ಲಯನ್ಸ್ ಬೆಸ್ಟ್ ಡೋನರ್ ಎವಾರ್ಡ್, ಸಹಾಯ ಸುಪ್ರಿಮ್ ಎಕ್ಸೆಲೆನ್ಸ್ ಎವಾರ್ಡ್, ಬೆಸ್ಟ್ ಕನ್ವೀನರ್ ಎವಾರ್ಡ್ ಹಾಗೂ ಅವರ ಶ್ರೀಮತಿಯವರಾದ ಕನಕವಲ್ಲಿ ಹರ್ಷಕುಮಾರ್ ಇವರು ಸ್ಫೂರ್ತಿ ಡೈಮಂಡ್ ಸುಪ್ರಿಮ್ ಎಕ್ಸಲೆನ್ಸಿ ಅವಾರ್ಡ್‌ಗಳನ್ನು ಜಿಲ್ಲಾ ಗವರ್ನರ್ ಶ್ರೀ ಕೆ. ಸಿ. ಪ್ರಭು ದಂಪತಿಗಳಿಂದ ಸ್ವೀಕರಿಸಿದರು.


## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜ್ಯೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧಿ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್– 9886629697, 9986119865

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2014ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

– ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ – 576 102.

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಉದಯಚಂದ್ರ ಪ್ರತಿಭಾ ಪುರಸ್ಕಾರ 2013-14

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2013-14ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2014ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%★ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ‍್ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**– ಸಂಚಾಲಕರು, ಯುವವೇದಿಕೆ.**

★(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ‍್ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸ್ತವ್ಯದಲ್ಲಿರುವ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ‍್ಯಾಂಕ್ ವಿಜೇತರಾದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ‍್ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2014ರ ಒಳಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು-576102, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ. **-ಕಾರ್ಯದರ್ಶಿ**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2014-2015ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಅರ್ಜಿ ಫಾರಂನ್ನು ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2014ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ – 576 102. ಫೋನ್ : 0820-2520754

### ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ 2014-15ನೇ ಸಾಲಿನ **ದಿ| ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ ದಿನಾಂಕ 31-10-2014. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನರಾವ್,**
**ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಟ್ಯಾಂಡ್ ಬಳಿ, ಉಡುಪಿ-576101**


ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
''ಶ್ರೀರಂಗ'', ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org